ಶ್ರೀಮತಿ ವನೋರಮಾ ವೆಂಕಟ್ರಾಜ್.— ಮಾನ್ಯ ಸಭಾಧ್ಯಕ್ಷರೆ, ಈ ರಾಷ್ಟ್ರದಲ್ಲಿ ಅಲ್ಪ ಸಂಖ್ಯಾತರಿಗೆ ಸಂವಿಧಾನದ ರಕ್ಷಣೆ ಇರುವುದರಿಂದ ಅಡ್ಮಿನಿಸ್ಟ್ರೇಷನ್‌ನಲ್ಲಿ ನಾವು ಹೆಚ್ಚು ಕೈ ಹಾಕುವುದಕ್ಕೆ ಆಗುವುದಿಲ್ಲ. ಬಹುಶಃ ಅವರು ಮಣಿಪಾಲದವರ ಬಗ್ಗೆ ಕೇಳಿದ್ದಾರೆ. ಅವರೂ ಕೂಡ ಭಾಷಾ ಅಲ್ಪಸಂಖ್ಯಾತರು ಎಂದು ಕೋರ್ಟಿಗೆ ಹೋಗಿ ಅದರ ರಕ್ಷಣೆ ಪಡೆದಿದ್ದಾರೆ. ಹಾಗಾಗಿ ನಾವು ಅವರಿಗೆ ಹೀಗೆ ಮಾಡಬೇಕೆಂದು ಇನ್‌ಸಿಸ್ಟ್ ಮಾಡಲಿಕ್ಕೆ ಸ್ವಲ್ಪ ಕಷ್ಟ ಉಂಟು.

ಉಪಾಧ್ಯಕ್ಷರು.— ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಹೀಗಿದೆ.

"ಅಭಿಯಾಚನೆ ಕ್ರಮಾಂಕ ೩೧ — ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು—

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ಬಿನಾಂಕ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬೦.೫೦.೬೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬.೦೧,೦೦ ೦೮೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು."

ಪ್ರಸ್ತಾವ ಅಂಗೀಕೃತವಾಯಿತು ಮತ್ತು ಬೇಡಿಕೆಗೆ ಒಪ್ಪಿಗೆ ದೊರೆಯಿತು

ಶ್ರೀ ವಾಟಾಳ್ ನಾಗರಾಜ್.— ನಾನು ಸೌದು ಎನ್ನುವವರ ಪರವಾಗಿಯೂ ಇಲ್ಲ. ಇಲ್ಲ ಎನ್ನುವವರ ಪರವಾಗಿಯೂ ಇಲ್ಲ. ತಟಸ್ಥನಾಗಿದ್ದೇನೆ.

ಉಪಾಧ್ಯಕ್ಷರು.— ಈಗ ಖಾಸಗಿ ಕಾರ್ಯಕಲಾಪಗಳು. ಶ್ರೀಯುತ ವಾಟಾಳ್ ನಾಗರಾಜ್ ಅವರು ಮಾತನಾಡಬೇಕು.

ಖಾಸಗಿ ಕಾರ್ಯ ಕಲಾಪಗಳು

ನಿಸರ್ಗ ಸಂಪತ್ತು ನಾಶವಾಗುವುದನ್ನು ತಪ್ಪಿಸಲು ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ).— ಮಾನ್ಯ ಉಪಾಧ್ಯಕ್ಷರೆ, ಈಗತಾನೆ ಆರೋಗ್ಯ ಇಲಾಖೆಯ ಬೇಡಿಕೆ ಮುಗಿಯಿತು. ಈಗ ಖಾಸಗಿ ಕಾರ್ಯಕ್ರಮಕ್ಕೆ ಬರುತ್ತಿದ್ದೇವೆ. ತಮ್ಮ ಅಪ್ಪಣೆಯನ್ನು ಪಡೆದು ಕೆಲವು ವಿಚಾರಗಳನ್ನು ತಮ್ಮ ಮುಂದೆ ನಾನು ಮಂಡಿಸುತ್ತಿದ್ದೇನೆ.

(ಶ್ರೀ ಟಿ.ಬಿ. ಜಯಚಂದ್ರ ಇವರು ಅಧ್ಯಕ್ಷ ಪೀಠದಲ್ಲಿದ್ದರು)

ಈ ರಾಜ್ಯದಲ್ಲಿ ನಿಸರ್ಗ ಸಂಪತ್ತನ್ನು ನಾಶ ಮಾಡುತ್ತಿರುವುದನ್ನು ತಪ್ಪಿಸಲು ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ಸಮಗ್ರವಾಗಿ ರಾಷ್ಟ್ರೀಕರಣ ಮಾಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ನಿರ್ಣಯವನ್ನು ಮಂಡಿಸಿದ್ದೇನೆ. ಈಗಾಗಲೇ ನಿರ್ಣಯದ ಬಗ್ಗೆ ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನಾದರೂ ಹಿಂದಿನ ಸಭೆಯಲ್ಲಿ ತಮಗೆ ತಿಳಿಸಿದಾಗ, ಈ ಸಭೆಯಲ್ಲೇ ಒಂದು ಪ್ರಮುಖವಾದಂಥ ನಿರ್ಣಯ ಇರುವಾಗ ಈ ನಿರ್ಣಯವನ್ನು ಕೆಡೆಗಾಣಿಸಿ ಸರ್ಕಾರ ಗ್ರಾನೈಟ್ ಉದ್ಯಮವನ್ನು ೧೦ ವರ್ಷಗಳ ಕಾಲ ನಿಷೇಧಿಸುವ ಬಗ್ಗೆ ಆದೇಶ ಹೊರಡಿಸಿದೆ. ಈಗಾಗಲೇ ಸಮೃದ್ಧವಾದ ಸಾಮಿಲ್‌ಗಳು ಜನ ನಿಸರ್ಗವನ್ನು ನಾಶ ಮಾಡುವುದಕ್ಕೋಸ್ಕರವಾಗಿ, ಗ್ರಾನೈಟ್ ಕಲ್ಲನ್ನು ಲೂಟಿಗೋಸ್ಕರವಾಗಿ ಅದರ ದರೋಡೆಗೋಸ್ಕರವಾಗಿ ಅನುಮತಿ ಪಡೆಯುವುದಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ದಾಳಿ ಇಟ್ಟಿದ್ದಾರೆ. ದಾಳಿ ಇಟ್ಟಿರತಕ್ಕ ಅರ್ಜಿಗಳ ಬಗ್ಗೆ ವ್ಯವಸ್ಥೆ ಸಚಿವರು ಗಮನಹರಿಸಿ ಅರ್ಜಿಗಳನ್ನು ತರಿಸಿಕೊಂಡು ಸಮಗ್ರವಾಗಿ ಪರಿಶೀಲನೆ ನಡೆಸಿ.

೧.೦೫ ಪಿ.ಎಂ.

ಯಾರ ಹೆಸರಿನಲ್ಲಿ ಅರ್ಜಿಗಳು ಬಂದಿವೆ? ಅದರ ಹಿಂದೆ ಯಾರು ಇದ್ದಾರೆ? ಅರ್ಜಿಯಲ್ಲಿ ಹೆಸರು ಒಬ್ಬರದಿ ಇದ್ದರೆ ಅದರ ಹಿಂದೆ ಪ್ರಭಾವಯುತ ವ್ಯಕ್ತಿಗಳು ಯಾರ್ಯಾರು ಇದ್ದಾರೆ ಎನ್ನುವುದು ತಮ್ಮ ಗಮನಕ್ಕೆ

ಬರಬೇಕು. ಈ ನಿಸರ್ಗವನ್ನು ಸರ್ವನಾಶವಾಗಿ ನಾಶ ಮಾಡುವುದಕ್ಕೆ ಒಂದು ವರ್ಗ ನಿರಂತರವಾಗಿ ನಿಂತಿದೆ. ಅವರಿಗೆ ನಿಸರ್ಗವೂ ಬೇಕಾಗಿಲ್ಲ, ಈ ರಾಜ್ಯದ ಅಭಿವೃದ್ಧಿಯೂ ಬೇಕಾಗಿಲ್ಲ. ಈ ರಾಜ್ಯದ ಪರಿಸರವೂ ಬೇಕಾಗಿಲ್ಲ.ಈ ಯಾವ ಒಂದು ವಿಚಾರವೂ ಅವರ ತಲೆಯಲ್ಲಿಲ್ಲ ಅವರಿಗೆ ಇಷ್ಟಕ್ಕಿಂಥಾದ್ದು ಡಾಲರ್‌ಗಳು, ಡಾಲರ್‌ಗಳು ಅವರ ಜೇಬಿಗೆ ಬರಬೇಕು. ಅದಕ್ಕೋಸ್ಕರವಾಗಿ ಅವರು ಯಾರನ್ನಾದರೂ ಮಾರುವುದಕ್ಕೆ ಸಿದ್ಧರಿದ್ದಾರೆ. ಈ ಗಂಟುಕಳ್ಳರು ಏನು ಇದ್ದಾರೆ. ಅವರಿಗೆ ಯಾರನ್ನಾದರೂ ಮಾರುವುದಕ್ಕೆ ಸಿದ್ಧರಿದ್ದಾರೆ. ಮೂರುವ ವಸ್ತುವಾಗಿ ಸಿಕ್ಕತಕ್ಕ ಎಲ್ಲ ವಸ್ತುಗಳನ್ನೂ ವಿದೇಶಗಳವರು ಪಡೆಯುತ್ತಾರೆ ಅಂದರೆ ಅದಕ್ಕೆ ಇಂತಹ ವಸ್ತು ಅಂತಹ ವಸ್ತು ಎಂದು ಏನೂ ಇಲ್ಲ. ಅವರಿಗೆ ಬೇಕಾಗಿರತಕ್ಕಂತಹದಲ್ಲಿ ಡಾಲರ್, ಡಾಲರ್ ಕಲ್ಲುಗಳು. ಡಾಲರ್ ಕಲ್ಲುಗಳು ಕಣ್ಣಿರು ಇಡುತ್ತವೆ' ಎಂದು ಸುಧಾ ಪತ್ರಿಕೆಯು ಹಿಂದೆ ಒಮ್ಮೆ ಬಂದಿತ್ತು. ಸುಮಾರು ಎರಡು ವರ್ಷಗಳ ಹಿಂದೆಯೇ 'ಡಾಲರ್ ಕಲ್ಲುಗಳು ಕಣ್ಣೀರ ಇಡುತ್ತವೆ' ಡಾಲರ್ ಕಲ್ಲುಗಳ ಕತೆ ಎಂಬುದಾಗಿ ಬಂದಿತ್ತು. ಇವತ್ತು ಸರ್ಕಾರಕ್ಕೆ ನಾನು ಅತ್ಯಂತ ಗಂಭೀರವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ರಾಜ್ಯದ ಆಡಳಿತವನ್ನು ನಡೆಸತಕ್ಕವರು ರಾಜಕಾರಣಿಗಳು. ರಾಜಕಾರಣಿಗಳು ಕೂಡಿಕೊಂಡು ನಿರ್ಮಿತವಾಗಿರತಕ್ಕಂಥಾದ್ದು ಸಚಿವ ಸಂಪುಟ; ಸಚಿವ ಸಂಪುಟಕ್ಕೆ ಸಲಹೆ ಮಾಡತಕ್ಕ ಅಧಿಕಾರ ವರ್ಗ ಇದೆ. ಈ ರಾಜ್ಯದಲ್ಲಿ ಬಹಳ ಬಹಳ ದೊಡ್ಡ ದೊಡ್ಡ ಅಧಿಕಾರಿಗಳು ಐ.ಎ.ಎಸ್. ಅಧಿಕಾರಿಗಳು ಉನ್ನತ ಅಧಿಕಾರಿಗಳು ಇದ್ದಾರೆ. ನಾನು ಅಧಿಕಾರಿಗಳನ್ನು ಪ್ರಶ್ನೆ ಮಾಡುತ್ತೇನೆ. ರಾಜಕಾರಣಿಗಳು ಸ್ವಲ್ಪ ಯೆದ್ದಾತದ್ದ ಏನೊ ಮಾಡಿರಬಹುದು ಅಂತ ಇಟ್ಟುಕೊಳ್ಳೋಣ. ಅಧಿಕಾರಿಗಳು ಏನು ಇದ್ದಾರೆ, ಅವರಿಗೆ ಏನಾದರೂ ತಲೆಗಿಲೆ ಕೆಟ್ಟಿತ್ತೆ ಅಂತ ನಾನು ಕೇಳುತ್ತಿದ್ದೇನೆ. ಇದರ ಬಗ್ಗೆ ಅವರು ಸಲಹೆ ಮಾಡಬೇಕಲ್ಲ ಸರ್ಕಾರಕ್ಕೆ. ಇದು ವಿಧಾನ ಸೌಧ, ಇದು ಕೆಂಗಲ್ ಹನುಮಂತಯ್ಯನವರು ಕಟ್ಟಿಸಿರತಕ್ಕ ವಿಧಾನ ಸೌಧ, ಇದಕ್ಕೊಂದು ಇತಿಹಾಸ ಇದೆ, ಇವನ್ನು ಸಿಡಿ ಮದ್ದು ಕಾಕಿ ಒಡೆಯಬೇಕಾದರು ಅಂತ ಇದೆ. ಒಡೆಯಬಹುದು ಎನ್ನುವ ನಿರ್ಧಾರಕ್ಕೆ ಮಂತ್ರಿ ಬಂದಾಗ ಸ್ವಾಮಿ, ಇದನ್ನು ಒಡೆಯಬಾರದು ಇದಕ್ಕೊಂದು ಇತಿಹಾಸ ಇದೆ ಎಂದು ಹೇಳತಕ್ಕಂಥ ಗುರುತರವಾದಂಥ ಜವಾಬ್ದಾರಿ ಸಲಹೆ ಕೊಡತಕ್ಕ ಜವಾಬ್ದಾರಿ ಅಧಿಕಾರಿಗಳಿಗೆ ಇರಬೇಕಾಗಿತ್ತು. ನಾನು ಸಚಿವರ ಬಗ್ಗೆ ಈಗ ನೇರವಾಗಿ ಯಾವುದನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ವೈಯಕ್ತಿಕವಾಗಿ ನನ್ನ ಹೃದಯ ಬಿಚ್ಚಿ ತಮಗೆ ಹೇಳುತ್ತಿದ್ದೇನೆ. ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇದು ನ್ಯಾಯವಾದ ಪ್ರಜಾಪ್ರಭುತ್ವದ ಮನೆ, ಈ ಮನೆಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಿಸರ್ಗ ಸಂಪತ್ತು ಏನಿದೆ, ಇದಕ್ಕೆ ಬೆಲೆ ಕಟ್ಟತಕ್ಕ ಶಕ್ತಿ ಯಾರಿಗಿದೆ? ನಿಸರ್ಗದ ಬೆಲೆ ಎಷ್ಟು? ಎಂಬುದು ಕೈಗಾರಿಕಾ ಕಾರ್ಯದರ್ಶಿಯವರಿಗೆ ಗೊತ್ತಿತ್ತೇ? ಅವರಿಗೆ ಗೊತ್ತಿಲ್ಲ. ಅವರು ಇದನ್ನು ಯಾವುದೋ ಒಂದು ಬೀಡಿ ಕಾರ್ಖಾನೆ ಅಂತ ತಿಳಿದುಕೊಂಡಿರಬೇಕು. ಅಥವಾ ಯಾವುದೋ ಒಂದು ಬೋಲ್ಟ್ ನಟ್ ತಯಾರು ಮಾಡತಕ್ಕಂಥ ಕಾರ್ಖಾನೆ ಎಂದು ತಿಳಿದುಕೊಂಡಿರಬೇಕು. ನಿಸರ್ಗ ಅಂದರೆ ಇದಕ್ಕೆ ಒಂದು ಇತಿಹಾಸ ಇದೆ. ನಿಸರ್ಗ ನಾಶವಾದರೆ ಇಡೀ ಮಾನವ ಕುಲವೇ ನಾಶವಾಗುತ್ತದೆ. ಬೇರೆ ಮಾತೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ತಾವು ಭೂಪಾಲ್‌ನಲ್ಲಿ ನೋಡಿದ್ದೀರಿ. ವಿಷಾನಿಲ ಸೋರಿದ ತಕ್ಷಣ ಲಕ್ಷಾಂತರ ಜನರು ಸತ್ತಿದ್ದಾರೆ. ಇನ್ನೂ ಆ ಪರಿಸ್ಥಿತಿಯ ಪರಿಣಾಮ ಅವರ ತಲೆ ಮೇಲೆ ಬೀಳುತ್ತಿದೆ. ಭೂಪಾಲ್‌ನಲ್ಲಿ ವಿಷಾನಿಲದಿಂದ ಜನತೆಯ ಮೇಲೆ ಕೆಟ್ಟ ಪರಿಣಾಮ ಬೀರಿ ಸಾವಿರಾರು, ಲಕ್ಷಾಂತರ ಜನ ತಮ್ಮ ಪ್ರಾಣವನ್ನೇ ಕಳಿದುಕೊಳ್ಳತಕ್ಕ ಪರಿಸ್ಥಿತಿ ಬಂತೊ ಅಂತಹ ಒಂದು ಪರಿಸ್ಥಿತಿ ಈ ರಾಜ್ಯದಲ್ಲಿ ಮುಂದೆ ಒಂದು ಕಾಲದಲ್ಲಿ ಒದಗಬಹುದು ಎನ್ನತಕ್ಕಂತಹ ಎಚ್ಚರಿಕೆಯನ್ನು ನಾನು ಕೊಡುತ್ತಿದ್ದೇನೆ. ಎಲ್ಲೆಲ್ಲಿ ಕಲ್ಲುಗಳನ್ನು ತೆಗೆದು, ಸುಂದರವಾದ ಕಲ್ಲುಗಳನ್ನು ನೆಲಸಮ ಮಾಡಿ, ಇಚ್ಛೆ ಬಂದ ಹಾಗೆ ಇಡೀ ಭೂಮಿಯನ್ನೇ ಒಂದು ರೀತಿ ಟೊಳ್ಳು ಮಾಡಿದ್ದಾರೆ, ಬೋಳಾಗಿದೆ. ಬಹುಶ: ನನಗನಿಸುತ್ತಿದೆ. ಈ ಸಂದರ್ಭದಲ್ಲಿ ತಮಗೆ ಒಂದೇ ಒಂದು ನಿದರ್ಶನ ಕೊಡುತ್ತಿದ್ದೇನೆ. ಕರ್ನಾಟಕದ ಇಳಕಲ್ ಒಂದರಲ್ಲೇ ೨ ಸಾವಿರ ಎಕರೆ ಪ್ರದೇಶದಲ್ಲಿ ಕಲ್ಲುಗಳನ್ನು ತೆಗೆಯುತ್ತಿದ್ದಾರೆ.

ಅಧ್ಯಕ್ಷರೇ, ತಮಗೆ ನಾನು ಹೇಳುತ್ತಿದ್ದೇನೆ, ಇವರು ಅನುಮತಿ ಕೊಡಲಿ ಅಥವಾ ಬಿಡಲಿ ಅವರು ತಮ್ಮ ಕೆಲಸ ತಾವು ಮಾಡುತ್ತಿದ್ದಾರೆ. ಸರ್ಕಾರದ ಅನುಮತಿ, ಸರ್ಕಾರದ ಪತ್ರದಲ್ಲಿ ಈಗ ಬಂದಿದೆ. ಇದಕ್ಕಿಂತ ಮೊದಲೇ ಗುತ್ತಿಗೆದಾರರು ಒಬ್ಬೊಬ್ಬರು ೫೦೦ ಎಕರೆಯಂತೆ ಹಂಚಿಕೊಂಡಿದ್ದಾರೆ ಆ ಕಲ್ಲು ಇಡೀ ಪ್ರಪಂಚದಲ್ಲೇ ಬಹಳ ಸುಂದರವಾದ ಕಲ್ಲು. ಆ ಕಲ್ಲಿನ ಬೆಲೆ ನಮ್ಮ ಕೈಗಾರಿಕಾ ಕಾರ್ಯದರ್ಶಿಯವರಿಗೇನು ಗೊತ್ತು ? ನಮ್ಮ ಅಧಿಕಾರಿಗಳಿಗೇನು ಗೊತ್ತು ? ಆ ಕಲ್ಲಿನ ಬೆಲೆ ಬಗ್ಗೆ ನಾನು ಮುಂದೆ ಹೇಳುತ್ತೇನೆ. ಈ ಕಲ್ಲಿನ ವಿಷಯವಾಗಿ ಸುಧಾ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಯಾರಿಗಾದರೂ ಹೃದಯ ಇದ್ದರೆ, ಕಣ್ಣು ಇದ್ದರೆ, ಕವಿ ಇದ್ದರೆ, ಮನುಷ್ಯತ್ವ ಇದ್ದರೆ, ಮಾನವೀಯತೆ

ಇದ್ದರೆ ಈ ಲೇಖನವನ್ನು ತಾವು ಯಾರಾದರೂ ಓದಿದರೆ ಕಣ್ಣೀರು ಬರುತ್ತದೆ. ಸಂಗಮೇಶ ಬಾರಿಗಿಡದ ಎನ್ನುವವರು ಈ ಸುಧಾ ಪತ್ರಿಕೆಯಲ್ಲಿ ಒಂದು ಒಳ್ಳೆ ಸುಂದರವಾದಂಥ ಲೇಖನವನ್ನು ಬರೆದಿದ್ದಾರೆ. ಈ ಕಲ್ಲಿನ ಚಿತ್ರಪಟವನ್ನು ನಾನು ಈ ಸಭೆಗೆ ತೋರಿಸುತ್ತೇನೆ ನೋಡಿ (ಮಾನ್ಯ ಸದಸ್ಯರು ಪುಸ್ತಕದಲ್ಲಿ ಮುದ್ರಿಸಿರುವ ಚಿತ್ರಗಳನ್ನು ಸಭೆಗೆ ತೋರಿಸಿದರು) ಈ ಲೇಖನವನ್ನು ಅಧಿಕಾರಿಗಳು ಓದಬೇಕು. ಐಎಎಸ್ ಎಂದ ತಕ್ಷಣ ಅವರೆಲ್ಲ ಮಹಾ ಸರ್ವಜ್ಞರು, ಮಹಾ ಪಂಡಿತರು ಎನ್ನತಕ್ಕಂಥಾದ್ದಲ್ಲ. ಇವರು ಸರ್ಕಾರಕ್ಕೆ ಹೇಳಬೇಕು ಈ ವಿಚಾರದಲ್ಲಿ ನೀವು ತಪ್ಪುದಾರಿಗೆ ಹೋಗುತ್ತಿದ್ದೀರಿ ಎಂದು ಹೇಳತಕ್ಕಂಥ ಶಕ್ತಿ ಅಧಿಕಾರಿವರ್ಗಕ್ಕೆ ಬರಲಿಲ್ಲ. ಈ ಒಂದೊಂದು ಕಲ್ಲಿಗೂ ಬೆಲೆ ಕಟ್ಟುವುದಕ್ಕೆ ಸಾಧ್ಯವಿಲ್ಲ. ಈ ಕಲ್ಲುಗಳು ಗೊಳೋ ಎಂದು ಕಣ್ಣೀರು ಇಡುತ್ತಿವೆ ಸರ್ಕಾರ ಅಲ್ಲ ಅಧಿಕಾರಿಗಳು ಅಲ್ಲ ಕಲ್ಲುಗಳೇ ಕಣ್ಣೀರಾಗುತ್ತದೆ ಒಂದೊಂದು ಕಲ್ಲಿಗೂ ಒಂದೊಂದು ಕಥೆ ಇದೆ ಈ ಕಥೆಯು ಇತಿಹಾಸ ಮಹತ್ವವಾಗಿದೆ. ''ಇಳಕಲ್ಲಿಗೆ ಬಂದ ಬಂಡೆ ಬಂಡೆ ಭಕ್ತಕರು'' ಎಂದು ಶೀರ್ಷಿಕೆ ಕೊಟ್ಟಿದ್ದಾರೆ ಮುಂದುವರಿದು ಅವರು ನಿಸರ್ಗವೇ ಕಡೆದಿಟ್ಟ ಈ ಪ್ರತಿಮೆಗಳಿಗೆ ಇನ್ನು ಉಳಿಗಾಲವಿಲ್ಲ. ಈ 'ಪಿಂಕ್ ಗ್ರಾನೈಟ್' ಶಿಲೆಗಳು ಡೈನಮೈಟ್ ಸಿಡಿತಕ್ಕೆ ಸಿಕ್ಕಿ ಜೂರುಜೂರಾಗಿ ನಗರಗಳಿಗೆ ಹೋಗುತ್ತವೆ. ಹೆಂಪೆಯ ಉಗ್ರ ನರಸಿಂಹನನ್ನು ಒಡೆದುಹಾಕಿದವರಿಗೂ ಇದಿನ ಗ್ರಾನೈಟ್ ಗುತ್ತಿಗೆದಾರರಿಗೂ ಯಾವುದೇ ವ್ಯತ್ಯಾಸ ಇದಯೇ ? ಎಂದಿದ್ದಾರೆ ಇವತ್ತು ಕರ್ನಾಟಕದ ವಿಜಯನಗರ ಸಾಮ್ರಾಜ್ಯಕ್ಕೆ ಏನು ಗತಿ ಒದಗಿ ಬಂದಿದೆ ಅದೇ ಸ್ಥಿತಿ ಇವಕ್ಕೂ ಬಂದಿದೆ. ಉಗ್ರನರಸಿಂಹ ಗಣಪತಿ ಮೂರ್ತಿಗಳಿಂದ ಆಗ ವಿಜಯನಗರ ಸಾಮ್ರಾಜ್ಯ ಯಾವ ರೀತಿ ಇತ್ತು ಎಂಬುದನ್ನು ಕಲ್ಲಿಸಿಕೊಳ್ಳಬಹುದು. ಇವತ್ತು ನಾವು ಈ ಕಲ್ಲುಗಳನ್ನು ಕತ್ತರಿಸಿ ಯಾವ ಸ್ಥಿತಿಗೆ ಬಂದಿದ್ದೇವೆಂದು ತಾವು ನೋಡಬಹುದು. ಸರ್ಕಾರ ಇವತ್ತು ಯಾವುದನ್ನು ವ್ಯಾಪಾರಕ್ಕೆ ಬಿಡಬೇಕು, ಯಾವುದರಿಂದ ಸರ್ಕಾರ ಹಣವನ್ನು ಪಡೆಯಬೇಕು ಎನ್ನುವುದನ್ನು ಸರ್ಕಾರದ ಗಮನಕ್ಕೆ ಪರಿಣಾಮಕಾರಿಯಾಗಿ ತರಬೇಕಾದುದು ನಮ್ಮ ಕರ್ತವ್ಯ. ಅಧ್ಯಕ್ಷರೇ, ಎಲ್ಲೆಲ್ಲಿ ಎಷ್ಟು ಕಲ್ಲನ್ನು ತೆಗೆದಿದ್ದಾರೆ ಎಂದು ಸರ್ಕಾರಕ್ಕೆ ಏನಾದರೂ ಮಾಹಿತಿ ಇದಯೇ ? ಕರ್ನಾಟಕದ ಉದ್ದಗಲಕ್ಕೂ ಎಲ್ಲೆಲ್ಲಿ ಈ ಕಲ್ಲುಗಳನ್ನು ತೆಗೆದಿದ್ದಾರೆ ಎನ್ನತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದಯೇ ಎನ್ನುವುದು ನನ್ನ ಪ್ರಶ್ನೆ ಎಷ್ಟು ಅಡಿ ಕಲ್ಲುಗಳನ್ನು ತೆಗೆದಿದ್ದಾರೆ ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದು ನನ್ನ ಎರಡನೇ ಪ್ರಶ್ನೆ ನೂರಕ್ಕೆ ನೂರು ಭಾಗ ಕಲ್ಲನ್ನು ತೆಗೆಯಲೇಬಾರದು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ನನ್ನ ಮೂಲ ನಿರ್ಣಯ ಮತ್ತು ನನ್ನ ನೀತಿ. ಇವತ್ತು ನನ್ನ ನೀತಿ ಏನೇ ಇರಲಿ ಕಲ್ಲನ್ನು ತೆಗೆಯಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಸರ್ಕಾರ ತರಾತುರಿಯಿಂದ ಬಂದು ನಿರ್ಧಾರಕ್ಕೆ ಬಂದಿದೆ. ಆರು ತಿಂಗಳು ಒಂದು ವರ್ಷ ಅಲ್ಲ, ಹತ್ತು ವರ್ಷಗಳ ಕಾಲ ಕೊಟ್ಟಿದೆ. ದರೋಡೆಕೋರರು ಕಲ್ಲು ಎಲ್ಲಿ ಸಿಗುತ್ತದೆ ಅಲ್ಲಿಗೆ ಹೊರಡುತ್ತಾರೆ. ಕಲ್ಲು ಎಲ್ಲಿ ಸಿಗುತ್ತದೆ ಅಲ್ಲಿನ ನೀಲಿ ನಕ್ಷೆಯನ್ನು ತಂದು ಹಣ ಕಟ್ಟಿ ಆಯಾ ಪ್ರದೇಶವನ್ನು ತಮ್ಮ ಆಸ್ತಿಯಾಗಿ ಮಾಡಿಕೊಳ್ಳಲಿಕ್ಕೆ ಈಗಾಗಲೆ ಹೊರಟಿದ್ದಾರೆ. ಇದಕ್ಕಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮೇಲೆ ದಾಳಿ ಮಾಡಿದ್ದಾರೆ. ಎಲ್ಲಿ ಕಲ್ಲನ್ನು ತೆಗೆಯಬಹುದು. ಈಗ ಕಲ್ಲನ್ನು ತೆಗೆದಿರುವ ಪ್ರಮಾಣ ಎಷ್ಟು ? ಕೆಳಗಡೆ ಎಷ್ಟು ಅಡಿ ಕಲ್ಲನ್ನು ತೆಗೆದಿದ್ದಾರೆ ? ಕಾಯಿದೆ ಪ್ರಕಾರ ೬ ಗಜ ಕಲ್ಲನ್ನು ತೆಗೆಯಬಹುದು ೬ ಗಜಕ್ಕಿಂತ ಕೆಳಗೆ ಹೋದರೆ ಅದು ದೊಡ್ಡ ಖನಿಜವಾಗುತ್ತದೆ. ಅದಕ್ಕೆ ಬೇರೆ ಬೇರೆ ಕಾಯಿದೆಗಳು ಬರುತ್ತವೆ, ಈ ಕಲ್ಲುಗಳನ್ನು ಇಡೀ ರಾಜ್ಯದ ಮೂಲೆ ಮೂಲೆಗಳಲ್ಲಿ ತೆಗೆದಿದ್ದಾರಲ್ಲ ಅಲ್ಲಿ ಎಷ್ಟು ಸಂರಂಗವಾಗಿದೆ, ಆ ಸಂರಂಗದಲ್ಲಿ ಎಷ್ಟು ಕೆಟ್ಟ, ಕೊಳೆತ ನೀರು ನಿಂತಿದೆ ? ಈ ನೀರಿನಿಂದ ಮನುಷ್ಯರ ಆರೋಗ್ಯದ ಮೇಲೆ ಏನು ಪರಿಣಾಮವಾಗಬಹುದು ? ಈ ರೀತಿ ಕಲ್ಲುಗಳನ್ನು ತೆಗೆದಿರುವುದರಿಂದ ಭೂ ವಿಜ್ಞಾನಿಗಳು ಇದರ ಬಗ್ಗೆ ಮುಂದೆ ಏನೇನು ಪರಿಣಾಮ ಆಗಬಹುದು ಎಂದು ವರದಿ ಕೊಡಬಹುದು.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಸದಸ್ಯರು ಮಾತನಾಡುವಾಗ ಇದಕ್ಕೆ ಬ್ಯಾಕ್‌ಗ್ರೌಂಡ್ ಇದಯೆಂದು ಹೇಳಿದಿರಿ ಇದಕ್ಕೆ ಯಾರ್ಯಾರು ಭಾಗಿಗಳು ಎಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ವೆಂಕಟೇಶ್‌ರವರೆ, ಭಾಗಿಗಳು ಯಾರ್ಯಾರು ಎಂದು ಹೇಳಬೇಕಾದ ಪರಿಸ್ಥಿತಿ ಬರುತ್ತದೆ ನಾವೂ ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ —ಅದನ್ನು ನಾನು ಹೇಳುತ್ತೇನೆ. ನಾನು ಬಹಳ, ಅತ್ಯಂತ ಮನನೊಂದು ಇದನ್ನು ಹೇಳುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯದ ವಿವಿಧ ಕಡೆಗಳಲ್ಲಿ ಕನಿಷ್ಟ ೨೫ ಸಾವಿರ ಎಕರೆಗಳಲ್ಲಿ ಕಲ್ಲನ್ನು ತಗೆದಿದ್ದಾರೆ. ಇದರಿಂದ ಪರಿಸರದ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವುದು ತಮಗೆ ಗೊತ್ತಿರಬಹುದು ಹಳೆಬೀಡು, ಬೇಲೂರು ಆವ್ಹಗಳ ಹತ್ತಿರದಲ್ಲಿ ಸಿಮೆಂಟ್ ಫ್ಯಾಕ್ಟರಿ ಬಂದು ಆ ಫ್ಯಾಕ್ಟರಿಯಿಂದ ಹೊರಬರುವ ಧೂಳು ಹಳೆಬೀಡು ಮತ್ತು ಬೇಲೂರಿನ

ಶಿಲ್ಪಕಲೆಗಳ ಮೇಲೆ ಬೀಳುವುದರಿಂದ ಎಷ್ಟು ತೊಂದರೆಯಾಗಿದೆ ಎಂಬುದನ್ನು ತಾವು ಕೇಳಿದ್ದೀರಿ. ತುಂಗಭದ್ರಾ ನದಿಗೆ ಹರಿಹರ ಪಾಲಿಫೈಬರ್ ಕಾರ್ಖಾನೆಯಿಂದ ಕೆಟ್ಟ ನೀರು ಬಿಡುವುದರಿಂದ ಮೀನುಗಳು ನಾಶವಾಗುತ್ತಿವೆ ಎನ್ನುವುದನ್ನು ಕೇಳಿದ್ದೇವೆ. ನಂಜನಗೂಡಿನಲ್ಲಿ ಕಪಿಲಾ ನದಿ ಇದೆ. ಅದು ಕಪಿಲ ಮಹರ್ಷಿ ತಪಸ್ಸು ಮಾಡಿದಂತಹ ಜಾಗ ಕಪಿಲಾ ನದಿಯ ಪಕ್ಕದಲ್ಲಿರತಕ್ಕ ಕಾರ್ಖಾನೆಗಳಿಂದ ಬರತಕ್ಕ ಕೆಟ್ಟ ನೀರು ನದಿಗೆ ಸೇರುವುದರಿಂದ ಏನಾಗಿದೆ ಎಂದರೆ ಸಮಗ್ರವಾಗಿ ನಾಶವಾಗುತ್ತಿದೆ. ಈ ಎಲ್ಲ ದೃಷ್ಟಿಕೋನವನ್ನು ಇಟ್ಟುಕೊಂಡು ಸರ್ಕಾರ ಯೋಜನೆ ಮಾಡಬೇಕಾಗಿದೆ. ಕಲ್ಲುಗಳನ್ನು ವಗಾರಾಟಕ್ಕೆ ಕೊಡಬೇಕಾದರೆ ಕಲ್ಲುಗಣಿಗಳನ್ನು ಮೊದಲು ನೋಡಬೇಕಾಗುತ್ತದೆ. ಮಾನ್ಯ ಸಚಿವರು ಕಲ್ಲುಗಣಿಗಳನ್ನು ನೋಡುವುದಕ್ಕೆ ಹೋಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನಂತೂ ಅವರು ಹೋಗಿಲ್ಲವೆಂದು ತಿಳಿದುಕೊಂಡಿದ್ದೇನೆ. ನೀವು ತಾನೇ ಎಷ್ಟು ಗಣಿಗಳಿಗೆ ಅಂತ ಹೋಗುತ್ತೀರಿ ? ನೀವು ಹೋಗುವುದಕ್ಕೆ ಸಾಧ್ಯವಿಲ್ಲ. ನನ್ನ ಜೊತೆಗೆ ಇಳಕಲ್‌ಗೆ ಹೋಗೋಣ ಬನ್ನಿ ಇಳಕಲ್‌ನಲ್ಲಿ ನಡೆದಿರತಕ್ಕ ದಂಧೆ, ದರೋಡೆಯನ್ನು ತಾವು ಬಹುಶಃ ಕೇಳಿದ್ದೀರಿ. ಅದನ್ನು ತಡೆಹಿಡಿಯಬೇಕಾದ್ದು ನಿಮಗೆ ಸೇರಿದ್ದು. ನಾನು ನಿಮ್ಮ ಮೇಲೆ ಆಕ್ಷೇಪಣೆ ಮಾಡಬೇಕೆಂದು ಹೇಳುತ್ತಿಲ್ಲ. ಯಾರಿಂದಲೋ ದುಡ್ಡು ತೆಗೆದು ಕೊಂಡಿದ್ದಾರೆಂದು ನಾನು ಹೇಳುತ್ತಿಲ್ಲ. ನಾನು ಅದರ ಬಗ್ಗೆ ಈಗ ಹೋಗುತ್ತಿಲ್ಲ. ನನ್ನ ಮೂಲಭೂತ ಪ್ರಶ್ನೆ ಏನೆಂದರೆ, ಖಂಡಿತಾ ದಯಮಾಡಿ ಅದಕ್ಕೆ ಕೈಹಾಕಬೇಡಿ. ನೀವು ಹೊರಡಿಸಿರತಕ್ಕ ಆಜ್ಞೆಯನ್ನು ಕೂಡಲೇ ಹಿಂದಕ್ಕೆ ಪಡೆಯಿರಿ. ಆ ಬಗ್ಗೆ ಒಂದು ಉನ್ನತಾಧಿಕಾರ ಸಮಿತಿಯನ್ನು ಮಾಡಿ ತಜ್ಞರು, ಪರಿಣಿತರು ಇರತಕ್ಕ ಒಂದು ಸಮಿತಿಯನ್ನು ಏರ್ಪಾಡಿ. ಇದರಿಂದ ಆಗತಕ್ಕ ಪರಿಣಾಮ ಏನೆಂಬುದನ್ನು ತಾವು ಕಂಡುಹಿಡಿಯಿರಿ.

ಶ್ರೀ ಎಂ. ಪಿ. ವೆಂಕಟೇಶ್.—ನಿಮ್ಮ ಶಾಸಕಾಂಗ ಪಕ್ಷದಲ್ಲಿ ಚರ್ಚೆಮಾಡಿ ಆದರ ಬಗ್ಗೆ ನಿಮ್ಮ ಪಕ್ಷದ ಶಾಸಕರುಗಳ ಒಪ್ಪಿಗೆಯನ್ನು ಕೇಳಿದರೆ ಅವರು ಸಹ ನಿಮಗೆ ಒಪ್ಪಿಗೆಯನ್ನು ಕೊಡುವುದಿಲ್ಲ ದಯವಿಟ್ಟು ಕೊಟ್ಟಿರುವ ಆಜ್ಞೆಗೆ ತಡೆ ಮಾಡಿ ನಾನು ಈ ಬಗ್ಗೆ ಮಾತನಾಡಿರುವವನಿದ್ದೇನೆ. ಮಾನ್ಯ ಸದಸ್ಯರು ಮಾತನಾಡಿದ ಮೇಲೆ ನಾನು ಮಾತನಾಡುವವನಿದ್ದೇನೆ. ನಾನು ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಪುಣ್ಯದಲ್ಲಿ ಮಾತನಾಡಿದರೆ ಮಾತನಾಡುವವರಿಗೆ ಕೂರ್ಶಿ ಬರುತ್ತದೆ. ನಾನು ಸಹ ಇದರಲ್ಲಿ ಇದ್ದೇನೆ. ಮಧ್ಯೆ ಮಧ್ಯೆ ಸ್ವಲ್ಪ ಅವರಿಗೆ ಸಹಕಾರ ಕೊಡಬೇಕಾಗುತ್ತದೆ.

ಒಬ್ಬರು ಮಾನ್ಯ ಸದಸ್ಯರು.—ನೂರಕ್ಕೆ ನೂರರಷ್ಟು ನಾವು ಇದನ್ನು ಒಪ್ಪುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಯಾರು ಒಪ್ಪಿಕೊಳ್ಳಲಿ, ಬಿಡಲಿ. ಅವರವರ ಹಣೆ ಬರಹ ಏನಾಗುತ್ತದೋ ನೋಡಿಕೊಳ್ಳೋಣ. ಅವರ ವಂಶದಲ್ಲಿ ಏನೇನಾಗುತ್ತದೋ ನೋಡಿಕೊಳ್ಳೋಣ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲರ ಆರೋಗ್ಯ ಚೆನ್ನಾಗಿ ಇರಲಿ. ಆಯಸ್ಸು ಚೆನ್ನಾಗಿ ಇರಲಿ. ಇದಕ್ಕೆಲ್ಲ ಒಂದು ಇತಿಹಾಸ ಇದೆ. ಯಾವುದೋ ಭೂತ ಇರಬಹುದು ಪ್ರೇತ ಇರಬಹುದು. ಯಾವುದೋ ದೈವತ್ವ ಇರಬಹುದು. ಶಕ್ತಿ ಇರಬಹುದು ಇವುಗಳನ್ನು ಮುಟ್ಟಿದವರು ಯಾರೂ ಉಳಿದಿಲ್ಲ. ಈಗಾಗಲೆ ಯಾರ್ಯಾರಿಗೆ ಏನೇನು ಆಗಿದೆ ಎಂದು ಹೇಳುತ್ತಾ ಹೋದರೆ ಆದು ಅಪ್ರಸ್ತುತ ಆಗುತ್ತದೆ ಧಾರಾಳವಾಗಿ ಯಾರು ಬೇಕಾದರೂ ಕಲ್ಲು ತೆಗೆಯಿರಿ. ನಾನು ಸರ್ಕಾರಕ್ಕೆ ಪ್ರಾಮಾಣಿಕವಾಗಿ ಒಂದು ವಿಚಾರವನ್ನು ಹೇಳುವುದಾದರೆ, ಈ ಕರ್ನಾಟಕದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಂತ ಒಂದಿದೆ. ಮತ್ತು ಮೈಸೂರು ಮಿನರಲ್ಸ್ ಲಿಮಿಟೆಡ್ ಅಂತ ಇನ್ನೊಂದಿದೆ. ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆ ವಿದೇಶಗಳಿಗೆ ಕಲ್ಲುಗಳನ್ನು ರಫ್ತು ಮಾಡುವುದಕ್ಕೆ ಇರತಕ್ಕ ಸರ್ಕಾರದ ಒಂದು ಸಂಸ್ಥೆ. ನಾನು ಅದನ್ನು ತಳ್ಳಿಹಾಕುವುದಿಲ್ಲ. ಈ ಸಂಸ್ಥೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಈ ಎರಡು ಸಂಸ್ಥೆಗಳ ಬಗ್ಗೆ ತಾವು ಒಂದು ಸಮಗ್ರವಾದಂಥ ತನಿಖೆ ಮಾಡಿಸುವುದಾದರೆ, ಇವತ್ತಿನದ್ದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ ಹತ್ತು ವರ್ಷದ್ದು ತನಿಖೆಗೆ ತಾವು ಆಜ್ಞೆ ಮಾಡಿ. ಇದರಲ್ಲಿ ಹೊಸ ಹೊಸ ಭ್ರಷ್ಟಾಚಾರ ನಡೆದಿರತಕ್ಕಂಥ ಅನೇಕ ವಿಚಾರಗಳು ಹೊರಬರುತ್ತವೆ. ಈಗ ತಾವು ಈ ಒಂದು ಬಿಸಿಗಿ ಗುತ್ತಿಗೆದಾರರಿಗೆ ಅನುಮತಿ ಕೊಡುವುದಕ್ಕೆ ಮುಂಚೆ ಏನು ನಿರ್ಧಾರ ಕೈಗೊಂಡಿದ್ದೀರಿ ? ನಿಮ್ಮ ಸರ್ಕಾರದ ಪೃವಸ್ಥೆಗಳು ಏನು ಈಗ ೨೦೦ ರಿಂದ ೬೦೦ ರೂಪಾಯಿ ಅಂತ ಹೇಳಿ ಹಣ ವಸೂಲು ಮಾಡುತ್ತೀರಿ ನಿಮ್ಮ ಸರ್ಕಾರದ ಅನುಮತಿ ಇಲ್ಲದೇ ಇದ್ದಾಗಲೂ ಸಹ ಒಂದು ದಿನಕ್ಕೆ ಕನಿಷ್ಟ ಮುನ್ನೂರು ಲಾರಿಯಷ್ಟು ಕರ್ನಾಟಕದ ವಿವಿಧ ಮೂಲೆಗಳಿಂದ ಜಿಂಗಳ್ಳರು ಬಂದರಿಗೆ ಕಲ್ಲುಗಳನ್ನು ಹೊಡೆದುಕೊಂಡು ಬರುತ್ತಾರೆ. ಈಗ ನೀವು ಆರ್ಜಿ ತೆಗೆದಿರಿ, ಎಲ್ಲಾ ಮಾಡಿದಿರಿ. ಹತ್ತು-ಹತ್ತು ವರ್ಷ ಎಂದು ಕೊಟ್ಟಿದ್ದೀರಿ. ನಾನು ಹೇಳುತ್ತೇನೆ. ಯಾವ ಪ್ರದೇಶದಲ್ಲಿ ಕಲ್ಲು ತೆಗೆಯಬೇಕು ಎಂದು ನೀವು ಕೊಟ್ಟಿರತಕ್ಕಂಥ ಆಜ್ಞೆಯಲ್ಲಿ ಇಲ್ಲ. ಎಲ್ಲೆಲ್ಲಿ ಕಲ್ಲನ್ನು ತೆಗೆಯಬೇಕೆಂದು ಯಾವುದೇ ನಿರ್ಧಾರ ಇಲ್ಲ. ನೀವು ಈ ರೀತಿ ಮಾಡಿರುವುದರಿಂದ ಯಾರು ನಿಮ್ಮ ಮೇಲೆ

ಪ್ರಯೋಗ ಮಾಡುತ್ತಿದ್ದಾರೆ, ಯಾರು ನಿಮ್ಮ ಪೆಗಲು ಮೇಲೆ ಬಂದು ಕುಳಿತರು, ಅಂತಹ ದೊಡ್ಡ ದೊಡ್ಡ ಕಲ್ಲುಕಳ್ಳರಿಗೆ, ಕಲ್ಲು ದರೋಡೆಕೋರರಿಗೆ ಅನುಕೂಲವಾಗುತ್ತಿದೆ. ನೀವು ಆನುಮತಿ ಕೊಟ್ಟಿರತಕ್ಕಂಥಾದ್ದರಲ್ಲಿ ನಿಸರ್ಗ ಉಳಿಯುವಹಾಗಿಲ್ಲ, ನಿಮ್ಮ ಸರ್ಕಾರದ ಖಜಾನೆ ಸಹ ಉಳಿಯುವುದಿಲ್ಲ. ಇದು ಎರಡೂ ಇದೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಸ್ವಾಮಿ, ಇಳಕಲ್‌ನಲ್ಲಿ ಸುಮಾರು ಮೂರು ಜನ ಬಹಳ ದೊಡ್ಡವರು ಇದ್ದಾರೆ ಜಮ್ ಗ್ರಾನೈಟ್ಸ್ ಅಂತ ಹೇಳಿ, ದೊಡ್ಡಣ್ಣವರ್ ಕಂಪನಿ ಅಂತ ಒಂದು, ಓರಿಯಂಟಲ್ ಅಂತ ಇನ್ನೊಂದು...

ಶ್ರೀ ಎಂ.ಪಿ. ಮೆಂಕಟೇಶ್.—ಮುದ್ದಿರೇಶ್ವರ ?

ಶ್ರೀ ವಾಟಾಳ್ ನಾಗರಾಜ್.—ಮುದ್ದಿರೇಶ್ವರ ಅವರು ಚಾಂಪಿಯನ್, ಅವರು ಚೀಫ್, ಇದಕ್ಕೆ ಅಧ್ಯಕ್ಷರು ಅವರೇ, ನಾನು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಇವರಿಗೆ ಐದುನೂರು ಎಕರೆ ಭೂಮಿ ಕೊಟ್ಟಿದ್ದಾರಲ್ಲ. ಈ ಭೂಮಿಯಲ್ಲಿರತಕ್ಕಂಥ ಈ ಖನಿಜ ಯಾರ ಸ್ವತ್ತು ? ಯಾರು ಸ್ವತ್ತು ಸ್ವಾಮಿ ಇದು? ಏಕೆ ಇದು ಲೂಟಿಯಾಗುತ್ತಿದೆ ? ನಾನು ಇದರ ಬಗ್ಗೆ ನೊಂದು ಈ ಮಾತನ್ನು ಹೇಳುತ್ತಿದ್ದೇನೆ.

ಮಂಗಳೂರು ಬಂದರಿನಲ್ಲಿರತಕ್ಕ ಮುಕ್ಕಾಲು ಭಾಗ ಕಲ್ಲು ಇಳಕಲ್ಲಿನದೇ. ಕೆಂಪು ಬಣ್ಣದ ಕಲ್ಲು, ಗುಲಾಬಿ ಬಣ್ಣದ ಕಲ್ಲು ಸಮಗ್ರವಾಗಿ ಇಳಕಲ್ಲಿನದೆ. ಸುತ್ತಮುತ್ತ ಹೊಡೆದು ಕತ್ತರಿಸಿ ಬಿಸಾಕಿರತಕ್ಕ, ಕೈಕಾಲು ಬೆಳ್ಳು ಕತ್ತರಿಸಿ ಬಿಸಾಕಿರತಕ್ಕ ಕಲ್ಲು ಎಲ್ಲಿದೆ ಗೊತ್ತೇ ? ಬಿಜಾಪುರದ ರಾಷ್ಟ್ರೀಯ ಹೆದ್ದಾರಿಯಲ್ಲಿ ತಾವು ಕಾರಿನಲ್ಲಿ ಹೋಗುವಾಗ ಎಡಬಲದಲ್ಲಿ ನೋಡಿದರೆ ಪರ್ವತದೋಪಾದಿಯಲ್ಲಿ ಬಿದ್ದಿದೆ. ಈ ಬಗ್ಗೆ ಸರ್ಕಾರ ಚಿಂತನೆಯೇ ಮಾಡಿಲ್ಲ, ಪರಿಸರವಾದಿಗಳನ್ನು ಮತ್ತು ನಿಸರ್ಗ ಪ್ರೇಮಿಗಳನ್ನು ಕರೆಯಿಲ್ಲ. ಮತ್ತು ವೈಜ್ಞಾನಿಕವಾಗಿ ಇದರ ಬಗ್ಗೆ ಅಪಾರವಾದ ಅನುಭವ ಇರತಕ್ಕ ಪಂಡಿತರನ್ನು ಕರೆಯಲಿಲ್ಲ. ಗುತ್ತಿಗೆದಾರರು ಬಂದು ಸರ್ಕಾರದ ಮೇಲೆ ಪ್ರಭಾವವನ್ನು ಬೀರುತ್ತಿದ್ದಾರೆ. ಅವರು ಈ ಸರ್ಕಾರದ ಮೆಲೆ ಯಾವರೀತಿ ಪ್ರಭಾವ ಬೀರುತ್ತಾರೆ ಎಂಬುದಕ್ಕೆ ಅನೇಕ ಕಾರಣಗಳಿವೆ. ಇದಕ್ಕೆ ಒಂದು ಉಪಾಹರಣೆಯನ್ನು ಕೊಡುತ್ತೇನೆ. ಯಾರನ್ನೂ ದೂಷಣೆ ಮಾಡಬೇಕೆಂಬ ಉದ್ದೇಶ ನನಗೆ ಇಲ್ಲ. ಪಂಚಾಚಾರ್ಯ ಜಗದ್ಗುರುಗಳ ಭಾರಿ ದೊಡ್ಡ ಉತ್ಸವ ನಾಳೆ ಅಥವಾ ನಾಡಿದ್ದು ನಡೆಯುತ್ತದೆ. ಅವರ ಬಗ್ಗೆ ನನಗೆ ಗೌರವವಿದೆ. ಆ ಉತ್ಸವ ನಡೆಯಲಿ. ಈ ಉತ್ಸವಕ್ಕೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಸೇರಿ ೫–೬ ಮಂತ್ರಿಗಳು ಹೋಗುವವರಿದ್ದಾರೆ. ಇದಕ್ಕೆ ಜಾಹೀರಾತು ಕೊಟ್ಟವರೆ. ಯಾರು ಅಂದರೆ ಸೂರ್ಯರಾವ್ ಎಂಬ ಒಬ್ಬ ದೊಡ್ಡ ಖಿದೀಮ. ಅವನು ಯಾರು ಎಂದರೆ ನೆಲಗಳ್ಳ. ಈ ರಾಜ್ಯದ ನೆಲವನ್ನೆಲ್ಲ ಗೃಹ ನಿರ್ಮಾಣ ಮಂಡಲಿ ಹೆಸರಿನಲ್ಲಿ ಲೂಟಿ ಮಾಡಿರತಕ್ಕವನು ಅವನು ಏತಕ್ಕೆ ಹೋಗುತ್ತಾನೆ ಅಂದರೆ, ಕಜ್ಜೆ ಹಾಕಿಕೊಂಡು ಮುಖ್ಯ ಮಂತ್ರಿಗಳ ಹಿಂದೆ ಮುಂದೆ ತಿರುಗಾಡಿಕ್ಕೆ ಬಿದ್ದು, ಕಾಲಿಗೆ ಬಿದ್ದು ಸ್ವಾಮಿ ನಾನು ಇದನ್ನು ಮಾಡಿದ್ದೇನೆಂದು ಹೇಳುವುದು. ಜಗದ್ಗುರುಗಳ ಉತ್ಸವ ಆಯಿತು, ಕಂಟ್ರಾಕ್ಟರ್ ಬಂದ, ಮುಖ್ಯಮಂತ್ರಿಗಳು ನೋಡಿದರು. ಬಹಳ ದೊಡ್ಡ ಮನುಷ್ಯರು ಇರಬಹುದೆಂದು ತಿಳಿದುಕೊಂಡರು. ಇಂತಹ ದಾಂಧಲೆ ಮಾಡುವವರು ಕರ್ನಾಟಕ ರಾಜ್ಯದಲ್ಲಿದ್ದಾರೆ ಸ್ವಾಮಿ. ಇನ್ನೊಂದು ಜಾಹೀರಾತು ಕೊಟ್ಟಿರುವವರು ರಾಮಾಚಂದ್ರ ಪಲ್ಲವಿ ಕನ್‌ಸ್ಟ್ರಕ್ಷನ್ಸ್. ಇವರೆಲ್ಲ ನೆಲಗಳ್ಳರು. ಇವರು ಏನೂ ಕಮ್ಮಿ ಇಲ್ಲ, ಉತ್ಸವ ನಡೆಯಲಿ. ಈ ಉತ್ಸವ ಮಾಡಿಸುವವರು ಇವರು. ಉತ್ಸವ ಮಾಡಲಿ, ಅವರಿಗೆ ನಾನು ಶರಣು, ಶರಣಾರ್ಥಿ. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ಈ ಉತ್ಸವದಿಯಲ್ಲಿ ಜಾಹೀರಾತು ನೀಡಿರುವವರು ಯಾರು ಅಂದರೆ ಈ ಕಲ್ಲು ಖಿದೀಮರುಗಳು ಉತ್ಸವದ ಬಗೆ ಜಾಹೀರಾತು ಕೊಡುವುದಕ್ಕೆ ಸ್ವಇಚ್ಛೆಯಿಂದ ಮಾಡಿರತಕ್ಕ ಇಬ್ಬರು ಕಂಟ್ರಾಕ್ಟರ್‌ಗಳ ವಿಷಯ ತಮಗೆ ಕೊಡುತ್ತೇನೆ. ಅವರ ಇತಿಹಾಸ ನಿಮಗೆ ಗೊತ್ತಿಲ್ಲದಿದ್ದರೆ ನೋಡಿಕೊಳ್ಳಿ. ಇನ್ನೂ ಇಂತಹ ಹಲವಾರು ಸಮಾರಂಭಗಳು ಈ ರಾಜ್ಯದಲ್ಲಿ ನಡೆಯುತ್ತಿರುತ್ತವೆ. ಇದಕ್ಕೇನೂ ಲೆಕ್ಕವಿಲ್ಲ. ಮಂತ್ರಿಗಳನ್ನು ಕರೆಯುವುದು, ಮಂತ್ರಿಗಳಿಗೆ ಬೇರೆ ಕೆಲಸವಿಲ್ಲ, ಇಂತಹ ಸಮಾರಂಭಗಳಿಗೆ ಹೋಗುತ್ತಿರುವುದೇ, ಈ ದೆಶಲ್ಲೂ ಇದು ನಡೆಯುತ್ತಿರುತ್ತದೆ. ಒಂದೊಂದು ಸಾರಿ ಒಂದೊಂದು ಸಮಾರಂಭಕ್ಕೆ ೧೨ ಜನ ಮಂತ್ರಿಗಳು ಹೋಗುವುದೂ ಉಂಟು. ಮೈಸೂರಿನ ಒಂದು ಸಮಾರಂಭದಲ್ಲಿ ನಾನು ನೋಡಿದ್ದೆ. ೧೨ ಜನ ಮಂತ್ರಿಗಳು ಬಂದಿದ್ದರು. ಅಲ್ಲಿ ಮೇಲೆ ಹೇರಿಯವರಿಗೆ ಕುರ್ಚಿ ಖಾಲಿ ಇರಲಿಲ್ಲ, ಇಲ್ಲಿ ಕ್ಯಾಬಿನೆಟ್ ಖಾಲಿಯಾಗಿತ್ತು. ಈ ಸಮಾರಂಭ ನಡೆಸುವುದರ ಬಗ್ಗೆ ನಾನು ವ್ಯಥೆ ಪಡುತ್ತಿಲ್ಲ, ಅದನ್ನು ನಡೆಸಲಿ.

ಇನ್ನು ಇಡೀ ರಾಜ್ಯದಲ್ಲಿ ಈ ಗಣಿ ಉದ್ಯಮದಿಂದ ಕಲ್ಲುಗಳನ್ನು ತೆಗೆದಿರುವುದರಿಂದ ಎಷ್ಟು ಜನರು ಸತ್ತಿದ್ದಾರೆ ಎಂಬ ಸಂಖ್ಯೆ ಇದೆಯೇ ? ಪ್ರತಿ ವರ್ಷ ಪ್ರತಿ ಗಣಿಯಲ್ಲಿ ಕನಿಷ್ಟ ಪಕ್ಷ ೧೦–೧೫ ಜನ ಸಾಯುತ್ತಿದ್ದಾರೆ. ಇದನ್ನು ಯಾರೂ ನೋಡಿಲ್ಲ. ಎಲ್ಲರೂ ಒಂದಾಗಿದ್ದಾರೆ. ಒಬ್ಬ ಸತ್ತರೆ

ಸತ್ತವನ ಹೆಣದ ಪರೀಕ್ಷೆ ಮಾಡುವವನಿಗೆ ಹಣ ಕೇಸಿಗೆ ಪೋಲೀಸರಿಗೆ ಹಣ, ದಫನ್ ಮಾಡುವವನಿಗೆ ಹಣ, ಸತ್ತವನಿಗೆ ಶವಸಂಸ್ಕಾರವೇ ಗತಿ. ಈ ರೀತಿ ನಡೆಯುತ್ತಿದೆ. ಈ ತರಹ ಎಷ್ಟು ಜನ ಕಲ್ಲು ಉರುಳಿ, ಸಿಡಿಮದ್ದು ಹಾರಿ ಹಾಗೂ ವಿವಿಧ ರೂಪದಲ್ಲಿ ಸತ್ತಿದ್ದಾರೆ ? ಈ ಬಗ್ಗೆ ತನಿಖೆ ನಡೆದಿದೆಯೇ ಎಂದರೆ ಒಂದು ತನಿಖೆಯೂ ಆಗಿಲ್ಲ. ಇವರು ೧೨ ರೂಪಾಯಿ ಕೂಲಿಗೆ ಬರತಕ್ಕ ಬಡವರು. ೧೨ ರೂಪಾಯಿ ಕೂಲಿಗೆ ಬರತಕ್ಕ ಬಡವರು ಸತ್ತಿರುವ ಬಗ್ಗೆ ತನಿಖೆಯಾಗಿಲ್ಲ.

ಕೈ ಕಳಿದುಕೊಂಡಿರುವ ಬಗ್ಗೆ ತನಿಖೆ ಆಗಲಿಲ್ಲ. ಇವರಿಗೆ ಪರಿಹಾರ ಏನೆಂದರೆ, ಆ ಸ್ಥಳದಲ್ಲಿಯೇ ೫ ಸಾವಿರ ರೂಪಾಯಿ ಅಥವಾ ೩ ಸಾವಿರ ರೂಪಾಯಿ ಪರಿಹಾರ ಕೊಟ್ಟದ್ದೇ. ಪರಿಹಾರ ಇದು ಇಳಕಲ್‌ನಲ್ಲಿ ಒಂದು ದೊಡ್ಡ ಭೂತಾಕಾರವಾಗಿದೆ, ಇಳಕಲ್‌ನಲ್ಲಿರುವ ಜಮೀನು ಇತಿಹಾಸ ಪ್ರಸಿದ್ಧವಾಗಿರತಕ್ಕಂಥಾದ್ದು.

ಶ್ರೀ ಎಂ ಮಹದೇವ್.—ತಾವು ಜನರಲ್ಲಾಗಿ ಇಂತಹ ಕಡೆ ಸಾಯುತ್ತಿದ್ದಾರೆಂದು ಹೇಳಿದಿರಿ ಆದರೆ ಇಂತಹ ಕಡೆಯೇ ಸತ್ತಿದ್ದಾರೆ, ಇಂತಹ ಕಂಪನಿಯಿಂದ ಅನಾಹುತವಾಗಿದೆ, ಇದನ್ನು ಮುಚ್ಚಿಟ್ಟಿದ್ದಾರೆ ಎಂದು ನಿಖರವಾಗಿ ಹೇಳಿದರೆ, ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಾಳೆಯೇ ಇದರ ಬಗ್ಗೆ ಒಂದು ತನಿಖಾ ಆಯೋಗ ರಚನೆ ಮಾಡುತ್ತೇವೆಂದು ಸರ್ಕಾರದವರು ಹೇಳಲಿ. ಎಲ್ಲೆಲ್ಲಿ ಸತ್ತಿದ್ದಾರೆ ಅಂತಹ ಕಡೆಗೆ ನಾನೇ ಕರೆದು ಕೊಂಡು ಹೋಗುತ್ತೇನೆ, ನಾನೇ ಎವಿಡೆನ್ಸ್ ಕೊಡುತ್ತೇನೆ.

ಚೇರ್ಮನ್.—ನೀವು ಈಗಾಗಲೇ ಪ್ರಾರಂಭ ಮಾಡಿ ಅರ್ಧ ಗಂಟೆಯಾಯಿತು, ನಿಮ್ಮ ಕಡತ ನೋಡಿದರೆ ಬಹಳಷ್ಟು ಇದೆ, ದಯಮಾಡಿ ಬೇಗ ಮುಗಿಸಿ.

ಶ್ರೀ ಎಂ. ಮಹದೇವ್.—ಅವರಿಗೆ ಸಾಕಾದಷ್ಟು ಟೈಮ್ ಕೊಡಿ, ಅವರ ಆರ್ಗ್ಯುಮೆಂಟ್ ಕೇಳುವವರಿಗೆ ಬೇಸರ ಇಲ್ಲ. ಜೊತೆಗೆ ಈಗ ಯಾರೂ ಅರ್ಜೆಂಟ್ ಹೋಗಬೇಕಾಗಿಲ್ಲ. ಮಹತ್ವವಾದ ವಿಚಾರವನ್ನು ಚರ್ಚೆ ಮಾಡುತ್ತಿದ್ದಾರೆ, ಅವರ ಅಭಿಪ್ರಾಯವನ್ನು ಹೇಳಲಿ.

ಚೇರ್ಮನ್.—ಕಾಲ ಮಿತಿ ಇರಬೇಕಲ್ಲ.....

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈ ಪ್ರಕರಣಗಳನ್ನು ಅವರು ತನಿಖೆ ಮಾಡುವುದಕ್ಕೆ ಹೋಗಿಲ್ಲ. ಸರ್ಕಾರ ಯಾವುದೇ ಒಂದು ಆಜ್ಞೆಯನ್ನು ನೀಡಬೇಕಾದರೆ, ಅನುಮತಿಯನ್ನು ಕೊಡ ಬೇಕಾದರೆ, ಅದರ ಪೂರ್ವಾಪರ ಯೋಚನೆ ಮಾಡಬೇಕಾಗಿತ್ತು. ಯಾವುದೇ ಪೂರ್ವಾಪರ ಯೋಚನೆಯನ್ನೇ ಮಾಡಿಲ್ಲ. ಈ ಗ್ರಾನೈಟ್ ಕಲ್ಲಿನ ಲೂಟಿಯ ಬಗ್ಗೆ ಸಮಗ್ರವಾದ ತನಿಖೆ ಆಗಲೇಬೇಕು. ಸುಮ್ಮನೆ ಯಾವುದೋ ಒಂದು ಸಿ. ಓ. ಡಿ. ತನಿಖೆಯಾಗಲಿ ಅಥವಾ ಇನ್ನಾವುದೋ ಒಂದು ಅಧಿಕಾರಿಗಳ ಮಟ್ಟದ ತನಿಖೆಯಾಗಲಿ, ಎಂದು ಅಲ್ಲ ನಾನು ಹೇಳುವುದು. ಹೈಕೋರ್ಟಿನ ಒಬ್ಬ ನ್ಯಾಯಾಧೀಶರ ಮಟ್ಟದಲ್ಲಿ ಸಮಗ್ರವಾದಂಥ ತನಿಖೆ ಆಗಬೇಕು. ಈ ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ಲೂಟಿ ಎಷ್ಟೆಷ್ಟು ನಡೆದಿದೆ, ಎಷ್ಟು ಅನ್ಯಾಯ ನಡೆದಿದೆ, ಎಷ್ಟು ನಿಸರ್ಗ ಸಂಪತ್ತು ನಾಶವಾಗಿದೆ ಎನ್ನುವುದರ ಬಗ್ಗೆ ಸಮಗ್ರವಾದ ತನಿಖೆ ನಡೆಸುವುದಕ್ಕೆ ಸರ್ಕಾರ ಆಜ್ಞೆ ಮಾಡಬೇಕು. ನಾನು ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡುವುದಕ್ಕೆ ತಯಾರಿಲ್ಲ. ಮುಖ್ಯಮಂತ್ರಿಗಳ ಬಗ್ಗೆ ನನಗೆ ಕಳಕಳಿ ಇದೆ. ಬಹುಶಃ ಈ ವಿಚಾರದಲ್ಲಿ ಅವರು ಒಂದು ನಿರ್ಧಾರಕ್ಕೆ ಬರಬೇಕು. ಇದರಲ್ಲಿ ಮೂರು ಪ್ರಶ್ನೆಗಳಿವೆ, ಮೊದಲನೆಯದು, ನಿಸರ್ಗ ಸಂಪತ್ತು ನಾಶವಾಗುವುದರ ಬಗ್ಗೆ ಸಮಗ್ರ ನಿರ್ಧಾರ, ಎರಡನೆಯದು ಪ್ರಾಣ ಹಾನಿ ಬಗ್ಗೆ ನಿರ್ಧಾರ, ಮೂರನೆಯದು, ಕರ್ನಾಟಕ ಸರಕಾರದ ಖಜಾನೆಗೆ ಬರತಕ್ಕ ಹಣ ಬೇರೆಯವರಿಗೆ ಹೋಗುವುದು. ನಾನು ಹೇಳುತ್ತೇನೆ, ನಿಮ್ಮ ಸರ್ಕಾರಕ್ಕೆ ಬರತಕ್ಕ ಹಣ ಯಾರಿಗೂ ಹೋಗುವುದಿಲ್ಲ. ಇನ್ನೂರರಿಂದ, ಆರು ನೂರು ರೂಪಾಯಿ ರಾಜಧನ ಕೇಳಿದ್ದೀರಿ. ನನಗನಿಸುತ್ತದೆ, ನೀವು ಈ ರಾಜಧನದಿಂದ ತೃಪ್ತಿ ಆಗುವುದು ಬೇಡ, ಇದರಿಂದ ನಿಮಗೆ ಬರತಕ್ಕ ಹಣ ೪೦ ಕೋಟಿ ರೂಪಾಯಿ ಎಂದು ಹೇಳಿದೆ. ಈ ೪೦ ಕೋಟಿ ರೂಪಾಯಿ ಏನೂ ದೊಡ್ಡ ಮೊತ್ತವಲ್ಲ...

ಶ್ರೀ ಎಂ. ಪಿ. ವೆಂಕಟೇಶ್.—ಫೈನಾನ್ಸ್ ಮಿನಿಸ್ಟರು, ೪೦, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ೨೦.

ಶ್ರೀ ವಾಟಾಳ್ ನಾಗರಾಜ್.—ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ, ೧೦ ರಿಂದ ೨೦ ಎಂದು ಇದೆ, ಆದರೆ ಆವತ್ತು ನಿಮ್ಮ ಪಕ್ಕದಲ್ಲಿ ಹಣಕಾಸಿನ ಸಚಿವರು ನಿಂತುಕೊಂಡು ೪೦ ಎಂದರು...

ಛೇರ್ಮನ್.—ಇದಕ್ಕೆ ಎರಡು ಗಂಟೆ ಕಾಲ ನಿಗದಿ ಮಾಡಿರುವುದು, ದಯವಿಟ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನಮಾಡಿ. ಈಗಾಗಲೇ ಎರಡು ಗಂಟೆ ಮುಗಿಯುತ್ತಾ ಬಂದಿದೆ...

ಶ್ರೀ ಎಂ. ಮಹದೇವ್.—ಅಧ್ಯಕ್ಷರೆ, ಸದನದಲ್ಲಿ ಕೋರಂ ಇದೆಯೇ ಎಂದು ಮೊದಲು ನೋಡಿಕೊಳ್ಳಿ.

ಶ್ರೀ ಎಂ. ಪಿ. ವೆಂಕಟೇಶ್.—ನಿನ್ನೆ ಈ ಕಡೆ ವಿರೋಧಪಕ್ಷದವರು ಹೇಳಿದಾಗ, ಅವರಿಗೆ ಕೋರಂ ಪ್ರಶ್ನೆ ಇರಲಿಲ್ಲ, ಇವತ್ತು ಅವರಿಗೆ ಕೋರಂ ಪ್ರಶ್ನೆ ಇದೆ...

ಛೇರ್ಮನ್.—ಇದಕ್ಕೆ ಕಾಲ ನಿಗದಿ ಮಾಡಿರುವುದು ಎರಡು ಗಂಟೆ ಮಾತ್ರ. ಈಗಾಗಲೇ ಎರಡು ಗಂಟೆಗಿಂತ ಜಾಸ್ತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಇದನ್ನು ಇನ್ನೂ ೩-೪ ವಾರ ಮಾತನಾಡೋಣ, ಮಾನ್ಯ ಸರ್ಕಾರಕ್ಕೆ ಮತ್ತು ಸಚಿವರಿಗೆ ಈ ಬಗ್ಗೆ ಮಾಹಿತಿ ಕೊಡೋಣ.

೧-೩೫ ಪಿ. ಎಂ.

ಸ್ವಾಮಿ, ತಾವು ಈ ಒಂದು ವಿಚಾರದಲ್ಲಿ ಸಮಗ್ರವಾದ ನ್ಯಾಯಾಂಗ ತನಿಖೆಯನ್ನು ಮಾಡಬೇಕಂ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಗಂಭೀರವಾದ ದೃಢ ನಿಲುವನ್ನು ತಳೆಯಲೇಬೇಕು. ಮೊದಲು ಇದನ್ನು ನಿಲ್ಲಿಸಬೇಕಂ, ಇವತ್ತು ಏನು ಸರಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ, ಇದನ್ನು ನಿಲ್ಲಿಸಲೇಬೇಕು. ಯಾರೋ ಕೆಲವರು ಲೂಟಿ ಮಾಡುತ್ತಿರತಕ್ಕಂಥವರಿಗೆ ಲೈಸೆನ್ಸ್ ಕೊಟ್ಟ ಹಾಗೆ ಆಗಿದೆ. ಈಗ ಈ ರೀತಿ ಲೈಸೆನ್ಸ್ ಕೊಟ್ಟಿರುವುದರಿಂದ ನಾನು ತಿರುಗಿ ಹಿಂದಕ್ಕೆ ಹೋಗಿ ಹೇಳುತ್ತೇನೆ. ನಾನು ಮಾತ್ರ ಎಂದೆಂದೂ ಕಲ್ಲನ್ನು ತೆಗೆಯಬೇಕೆಂದು ಹೇಳಂವವನಲ್ಲ, ಯಾವತ್ತೂ ಹೇಳುವವನಲ್ಲ. ನಾನಂತೂ ಕಲ್ಲು ತೆಗೆಯಂವುದು ನಿಲ್ಲಲೇಬೇಕೆಂದು ಹೇಳುವವನು. ರೈತ ಸಂಘದವರ ನಿರ್ಧಾರವೂ ಇದೆ. ನನ್ನ ಅನೇಕ ಜನ ಮಿತ್ರರ ನಿರ್ಧಾರವೂ ಇದೇ, ರಾಜ್ಯದಲ್ಲಿ ೩೪ ಕಲ್ಲು ತೆಗೆಯುವ ಕಾರ್ಖಾನೆಗಳು ಇವೆ. ಈ ೩೪ ಕಾರ್ಖಾನೆಗಳು ದೊಡ್ಡ ದೊಡ್ಡ ಲೂಟಿ ಮಾಡತಕ್ಕಂಥವರದ್ದು. ಹಗಲುದರೋಡೆ ಮಾಡುತ್ತಿರತಕ್ಕಂಥವರದ್ದು. ಈಗ ಕಾರ್ಖಾನೆ ಇರುವವರಿಗೆ ಮಾತ್ರ ಕಲ್ಲುಗಳನ್ನು ತೆಗೆಯಲು ಅನುಮತಿ ಕೊಡುತ್ತೇವೆಂದು ಹೇಳಿದ್ದೀರಿ. ಇದರ ಅರ್ಥ ಏನು ? ನಾನು ಅತ್ಯಂತ ಕಳಕಳಿಯಿಂದ, ವಿನಯದಿಂದ ಸರಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ದಯವಿಟ್ಟು ತಾವು ಮಾಡುತ್ತಿರತಕ್ಕಂಥಾದ್ದು ಯಾವ ಕಾಲಕ್ಕೂ ಸರಿಯಲ್ಲ. ದಯವಿಟ್ಟು ಸ್ವಲ್ಪ ಹಿಂದಕ್ಕೆ ಬನ್ನಿ. ನಿಮ್ಮ ಸರಕಾರಕ್ಕೆ ಹಣ ಬರುತ್ತದೆ. ನಿಜ. ಆ ಹಣದ ಹಿಂದೆ ಇರತಕ್ಕಂಥ ಸಮಗ್ರತೆಯನ್ನು ತಾವು ಪರಿಶೀಲಿಸಬೇಕು. ಇದನ್ನು ಪರಿಶೀಲಿಸದಿದ್ದರೆ ಅತ್ಯಂತ ಘೋರವಾದ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕೈಗಾರಿಕಾ ಇಲಾಖೆಯಲ್ಲಿ, ಅಧಿಕಾರಿಗಳು ಏನು ತಪ್ಪು ದಾರಿಗೆ ಎಳೆಯುತ್ತಾರೆ, ಆ ದಾರಿಯಲ್ಲಿ ತಾವು ಹೋಗಬಾರದು. ಮೊದಲು ಇದರ ಬಗ್ಗೆ ಸರಕಾರದ ಮಟ್ಟದಲ್ಲಿ ತನಿಖೆ ಶುರು ಮಾಡಿ. ನ್ಯಾಯಾಂಗ ತನಿಖೆ ಮಾಡುವುದಕ್ಕೆ ಮುಂಚೆ ಸರಕಾರದ ಮಟ್ಟದಲ್ಲಿ ತನಿಖೆ ಮಾಡಿ, ಸಚಿವರಾದ ತಾವು ಕನಿಷ್ಠ ೫೦ ಗಣಿಗಳನ್ನಾದರೂ ಸಂದರ್ಶನ ಮಾಡಿ ಆಗ ನಿಮಗೆ ಗೊತ್ತಾಗುತ್ತದೆ. ಮೊದಲು ಮಂಗಳೂರು ಬಂದರಿಗೆ ಬನ್ನಿ. ಎಷ್ಟು ಕಲ್ಲು ತೆಗೆದು ಸಾಗಿಸುತ್ತಾರೆ ಎಂಬುದು ನಿಮಗೆ ಗೊತ್ತೇ ? ಅವರ ಗಣಿಗಳ ಮುಂದೆ ಚೆಕ್ ಪೋಸ್ಟ್ ಇದೆಯೇ ? ಕಲ್ಲು ತೆಗೆದು ಲಾರಿಗೆ ಹಾಕಿ ಮಂಗಳೂರು ಬಂದರಿಗೆ ಸಾಗಿಸಬೇಕು. ಕಲ್ಲು ತೆಗೆದಂ ಲಾರಿಗೆ ಹಾಕಿದಾಗ ಎಷ್ಟು ಕಲ್ಲು ತೆಗೆದು ಲಾರಿಗೆ ಹಾಕಿದರು ಎಂದು ಬರೆಯುವವರು ಯಾರು ? ಅಂದ ಮೇಲೆ ನಿಮ್ಮ ರಾಜಧನವನ್ನು ನಿರ್ಧಾರ ಮಾಡುವವರು ಯಾರು ? ೨೦ ಕೋಟಿ ರೂಪಾಯಿ ಆದಾಯ ಯಾವ ಲೆಕ್ಕದಲ್ಲಿ ನಿಮಗೆ ಬಂತು ಎಂದು ಕೇಳಿದರೆ ಮಂಗಳೂರು ಬಂದರಲ್ಲಿ ಹಡಗಿಗೆ ಹೋದ ಕಲ್ಲುಗಳಿಂದ ಬಂತು ಎಂದು ನೀವು ಹೇಳಬಹುದು. ಅದೆಲ್ಲ ಕಲ್ಲುಗಳು ಮಂಗಳೂರಿಗೆ ಬಂದರೂ ಮೂಲಕವೂ ಹೋಗುತ್ತದೆ, ಖಾಸಗಿ ಕಾರ್ಖಾನೆಗಳಿಗೂ ಬರುತ್ತದೆ ತಮಿಳುನಾಡಿಗೂ ಹೋಗುತ್ತವೆ. ಅಂದ ಮೇಲೆ ನಿಮ್ಮ ಲೆಕ್ಕ ಸರಿ ಇಲ್ಲ. ನಿಮ್ಮ ಹತ್ತಿರ ಲೆಕ್ಕ ಇಲ್ಲ. ನಿಮ್ಮ ಹತ್ತಿರ ಲೆಕ್ಕ ಇದ್ದಿದ್ದರೆ ಹೇಳಿರಿ. ಸುಮಾರು ೨೦ ವರ್ಷದಿಂದ ಈ ಕಲ್ಲಿನ ಉದ್ಯಮ ನಿರಾಂತವಾಗಿ ಶುರುವಾಗುತ್ತಾ ಬಂದು

ಇಂದು ಭೂತಾಕಾರವಾಗಿ ಬೆಳೆದಿದೆ, ಐದು ವರ್ಷಗಳಿಂದ ಈಚೆಗೆ ಕೇವಲ ೨೦೦ರೂಪಾಯಿ ರಾಜಧನ ಇತ್ತು ಆಗ ಕೋಟಿ ಕಿಕೋಟಿ ಶಿಕೋಟಿ ಬರುತ್ತಿತ್ತು ಈಗ ರಾಜಧನವನ್ನು ೨೦೦ರಿಂದ ೬೦೦ ಮಾಡಿದ್ದೀರಿ ಆದರಿಂದ ಈಗ ೨೦ಕೋಟಿರೂಪಾಯಿಗಳು ಬರುತ್ತದೆ ಎಂದು ಹೇಳುತ್ತೀರಿ ಇದರಲ್ಲಿ ನಾನಾ ತರಹದ ಕಲ್ಲುಗಳು ಇವೆ. ಬಿಂಕ್ ಕಲ್ಲುಗಳು ಇವೆ. ಇನ್ನೊಂದು ಸುಂದರವಾದ ಇಳಕಲ್ ಕಲ್ಲು ಇದೆ. ಒಂದು ಕ್ಯೂಬಿಕ್ ಮೀಟರ್ ಇಳಕಲ್ ಕಲ್ಲನ್ನು ತೆಗೆದು ಲಾರಿಯಲ್ಲಿ ಹಾಕಿ ತೆಗೆದುಕೊಂಡು ಹೋಗಿ ಮಂಗಳೂರು ಬಂದರಿಗೆ ಸಾಗಿಸಿದರೆ ೪೦ ಸಾವಿರ ರೂಪಾಯಿ ಬರುತ್ತದೆ.

ನೀವು ತೆಗೆದುಕೊಳ್ಳುವುದು ಬರೀ ೬೦೦ ರೂಪಾಯಿಗಳು ಅದರಿಂದ ೪೦ ಸಾವಿರ ರೂಪಾಯಿಗಳು ಅವರಿಗೆ ಬರುತ್ತದೆ, ನೀವು ೬೦೦ ರೂಪಾಯಿಗಳ ರೇಟ್ ಹೇಗೆ ಹಾಕಿದ್ದೀರಿ? ಯಾವ ಯಾವ ಕಲ್ಲಿಗೆ ಎಷ್ಟೇಷ್ಟು ರೇಟ್ ಹಾಕಿದ್ದೀರಿ? ಏನೂ ಇಲ್ಲ. ಕಪ್ಪು ಕಲ್ಲಿನ ರೇಟ್ ಎಷ್ಟು? ಬೂದು ಬಣ್ಣದ ಕಲ್ಲಿಗೆ ಎಷ್ಟು ರೇಟ್. ಗುಲಾಬಿ ಬಣ್ಣದ ಕಲ್ಲಿಗೆ ಎಷ್ಟು ರೇಟು ಎಂದು ನಿಗದಿ ಮಾಡಿದ್ದೀರಿ? ಎಲ್ಲಿದೆ ನಿಮ್ಮ ಹತ್ತಿರ ಆ ಲೆಕ್ಕ? ಸುಮ್ಮನೆ ೨೦೦ ರೂಪಾಯಿಗಳಿಂದ ೬೦೦ ರೂಪಾಯಿಗಳು ಎಂದು ಹೇಳಿದಿರಿ. ಅದರಿಂದ ಒಂದು ೨೦ ಕೋಟಿ ರೂಪಾಯಿಗಳು ಬರುತ್ತದೆ ಎಂದು ಹೇಳಿದಿರಿ. ನಾನು ತಮಗೆ ಪ್ರಾಮಾಣಿಕವಾಗಿ ಹೇಳುತ್ತೇನೆ. ಈ ಕಲ್ಲನ್ನು ಮಾರಲೇಬೇಕು ಎಂದು ನಿಮ್ಮ ಸರ್ಕಾರ ನಿರ್ಧಾರ ಮಾಡುವುದಾದರೆ ನಿಸರ್ಗವೂ ಬೇಡ, ಸಂಪತ್ತೂ ಬೇಡ, ದೇವಾಲಯಗಳು ಬೇಡ, ಧರ್ಮಾಲಯಗಳು ಬೇಡ, ಯಾವುವೂ ಬೇಡ ನೀವು ಏನೇ ಹೇಳಿ ನಾವು ಮಾರೇ ಮಾರುತ್ತೇವೆಂದು ನಿರ್ಧಾರಕ್ಕೆ ಬಂದರೆ ನೀವು ಸ್ವಲ್ಪ ನಿಮ್ಮ ಎದೆ ಮುಟ್ಟಿ ಪ್ರಾಮಾಣಿಕವಾಗಿ ಮಾರಿ ಇದರಿಂದ ಸರ್ಕಾರಕ್ಕೆ ಒಂದು ವರ್ಷಕ್ಕೆ ೨೦೦ ಕೋಟಿ ರೂಪಾಯಿಗಳು ಬರುತ್ತದೆ. ಅದೂ ಎಷ್ಟು ವರ್ಷ ಬರಬಹುದು ಎಂದರೆ ನನ್ನ ಪ್ರಕಾರ ಇನ್ನು ಒಂದು ೧೦ ವರ್ಷ ಬರಬಹುದು. ಹತ್ತು ವರ್ಷ ಆದಮೇಲೆ ಭೂಮಿ ಎಲ್ಲಾ ಟೊಳ್ಳಾಗಿ ಇಡೀ ರಾಜ್ಯದ ಸುತ್ತ ಭೂಮಿಯಲ್ಲಿ ದೊಡ್ಡ ಕಂದಕ ಆಗಿ ಯಾವತ್ತಾದರೂ ಒಂದು ದಿವಸ ಈ ರಾಜ್ಯದಲ್ಲಿ ಭೂಕಂಪ ಆಗಿ ಭೂಮಿ ಎರಡು ಭಾಗಗಳಾಗಿ ಸಾವಿರಾರು ಜನ ಭೂಮಿಯೊಳಗೆ ಹೋಗುವಂತಹ ಪರಿಸ್ಥಿತಿಯನ್ನು ನಾವು ನಮ್ಮ ಕಣ್ಣೆದುರಿಗೆ ನೋಡತಕ್ಕಂಥ ಕಾಲ ಬರುತ್ತದೆ. ಆದರಲ್ಲಿ ಬೇರೆ ಮಾತು ಇಲ್ಲ ನೀವು ತಜ್ಞರನ್ನು ಕರೆಸಿ ಕೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಭೂಕಂಪ ಆದಾಗ ಮಾನ್ಯ ವಾಟಾಳ್ ನಾಗರಾಜ್ ಒಬ್ಬರೇ ಉಳಿದುಕೊಂಡು ನೋಡಂತ್ತಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ನಾವು ನೀವು ಯಾರೂ ಇರುವುದಿಲ್ಲ. ಮಾನ್ಯ ಸಚಿವರಿಗೆ ನಾನು ಹೇಳುತ್ತೇನೆ. ದಯವಿಟ್ಟು ತಾವು ಇದನ್ನು ಲಘುವಾಗಿ ತೆಗೆದುಕೊಳ್ಳಬೇಡಿ. ಈಗಾಗಲೆ ತಮಗೆ ಗೊತ್ತಿದೆ, ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ ಎಷ್ಟು ಕಲ್ಲು ತೆಗೆದಿದ್ದಾರೆ ಎನ್ನುವ ಮಾಹಿತಿ ಇಲ್ಲ. ಎಳಂದೂರಿನಲ್ಲಿ ಎಷ್ಟು ಕಲ್ಲು ತೆಗೆದಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಸಾವನದುರ್ಗದಲ್ಲಿ ಎಷ್ಟು ಕಲ್ಲು ತೆಗೆದಿದ್ದಾರೆ ಎನ್ನುವ ಮಾಹಿತಿ ಇಲ್ಲ, ಇಳಕಲ್ಲಿನಲ್ಲಿ ಎಷ್ಟು ಕಲ್ಲು ತೆಗೆದಿದ್ದಾರೆ ಎನ್ನುವ ಮಾಹಿತಿ ಇಲ್ಲ, ಜಿಗಣಿಗೆಯಲ್ಲಿ ಎಷ್ಟು ಕಲ್ಲು ತೆಗೆದಿದ್ದಾರೆ ಎನ್ನುವ ಮಾಹಿತಿ ಇಲ್ಲ. ರಾಮದೇವರ ಗುಡ್ಡದಲ್ಲಿ ಎಷ್ಟು ಕಲ್ಲು ತೆಗೆದಿದ್ದಾರೆ ಎನ್ನುವ ಮಾಹಿತಿ ಇಲ್ಲ. ನಾನು ಬೇಕಾದರೆ ತಮಗೆ ಆ ಮಾಹಿತಿಯನ್ನು ಕೊಡುತ್ತೇನೆ. ನನ್ನನ್ನು ಕರೆಯಿರಿ. ನಾನು ಸರ್ಕಾರಕ್ಕೆ ಮಾಹಿತಿ ಕೊಡುತ್ತೇನೆ. ಈಗ ತಾವು ಬೇರೆಯವರಿಗೆ ಕೊಡಬೇಕೆಂದು ಮಾಡಿರುವ ಆರ್ಡರ್ ಅನ್ನು ದಯವಿಟ್ಟು ಸ್ಟಾಪ್ ಮಾಡಿ. ಇದರಲ್ಲಿ ಏನೇನು ಅನ್ಯಾಯಗಳು ನಡೆದಿವೆ, ಎಲ್ಲವನ್ನು ಮುಚ್ಚುಮರೆ ಇಲ್ಲದೆ ಗಂಭೀರವಾಗಿ ಒಂದು ದಿನ ಪೂರ್ತಿ ಕುಳಿತುಕೊಂಡು ಬೇಕಾದರೆ ನಾನು ತಮಗೆ ಸಮಗ್ರವಾಗಿ ತಿಳಿಸುತ್ತೇನೆ. ಇದು ನಡೆದಿದೆ ಕಲ್ಲಿನ ವ್ಯಾಪಾರ ವ್ಯವಹಾರವನ್ನು ತಾವು ನೋಡಬೇಕು. ಸ್ವಲ್ಪ ಆ ಕಂಟ್ರಾಕ್ಟ್‌ದಾರರ ಹಳೆಯ ಲಿಸ್ಟ್ ತರಿಸಿ. ಅವರು ಮೊದಲು ಏನಾಗಿದ್ದರು, ಈಗ ಏನಾಗಿದ್ದಾರೆ ಎಂದು ತಿಳಿಯುತ್ತದೆ. ಅವರು ಬೇಕಾದರೆ ವಿಧಾನ ಸೌಧವನ್ನೂ ವ್ಯಾಪಾರ ಮಾಡುವ ಮಟ್ಟಕ್ಕೆ ಬಂದಿದ್ದಾರೆ. ಅವರಂ ಇದೇ ವಿಧಾನಸೌಧವನ್ನು ಕೊಂಡುಕೊಳ್ಳತಕ್ಕಂಥ ಶ್ರೀಮಂತರಾಗಿದ್ದಾರೆ.

ಶ್ರೀ ಹೆಚ್. ವಿಶ್ವಾನಾಥಯ್ಯ.—ವಿಧಾನ ಸೌಧವನ್ನೋ ಅಥವಾ ವಿಧಾನಸೌಧದಲ್ಲಿರುವವರನ್ನೋ.

ಶ್ರೀ ವಾಟಾಳ್ ನಾಗರಾಜ್.—ನಾನು ಆ ಮಾತು ಹೇಳುವುದಿಲ್ಲ. ನಾನು ಹೇಳಿದರೆ ಅವರು ನನ್ನ ಮೇಲೆ ಜಗಳಕ್ಕೆ ಬೀಳುತ್ತಾರೆ.

ಶ್ರೀ ಎಂ. ಮಹದೇವ್.—ನೀವು ಮಾತನಾಡಿ. ಈ ಕಡೆ ಜನ ಇಲ್ಲ. ನೀವು ಏನು ಬೇಕಾದರೂ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಆತ್ಮ ಬಿಚ್ಚಿ, ಹೃದಯ ಬಿಚ್ಚಿ ಈ ಮಾತನ್ನು ಹೇಳುತ್ತಿದ್ದೇನೆ. ದಯವಿಟ್ಟು ಏನು ಆರ್ಡರ್ ತಾವು ಈಗ ಮಾಡಿದ್ದೀರಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ. ಏನು ತೊಂದರೆ ಆಗುವುದಿಲ್ಲ. ನೀವು ಮಾರಲೇಬೇಕು ಎಂದು ಹೋದರೆ ನಾನು ಅದನ್ನು ತಡೆಯುವುದಕ್ಕಾಗುವುದಿಲ್ಲ. ಮುಂದೆ ಏನು ಮಾಡಬೇಕೋ ಮಾಡಿ. ಇದಕ್ಕೆ ನಾನು ಒಂದು ಸಲಹೆ ಕೊಡುವುದೇ ನೆಂದರೆ, ತಾವು ಒಂದು ಉನ್ನತ ಮಟ್ಟದ ಸಮಿತಿಯನ್ನು ಮಾಡಿ. ಈಗ ನಿಮ್ಮಲ್ಲಿ ಒಂದು ಸಮಿತಿಯನ್ನು ಮಾಡಿಕೊಂಡಿದ್ದೀರಿ. ಆ ಸಮಿತಿ ಲೈಸೆನ್ಸ್ ಕೊಡುವುದಕ್ಕೆ ಇದೆ, ಲೈಸನ್ಸು ಯಾರಿಗೆ ಕೊಡಬೇಕು ಯಾರಿಗೆ ಬಿಡಬೇಕು ಎನ್ನುವುದಕ್ಕೆ ಸಮಿತಿ ಮಾಡಿದ್ದೀರಿ, ನನಗೆ ಗೊತ್ತು, ಅವರು ಯಾರಿಗೆ ಬೇಕಾದರೂ ಕೊಡಬಹುದು, ಏನು ಬೇಕಾದರೂ ವ್ಯಾಪಾರ ಮಾಡಬಹುದು, ಅದರಲ್ಲಿ ವ್ಯಾಪಾರ ಬಿಟ್ಟು ಬೇರೆ ಏನೂ ಇಲ್ಲ. ೧೦ ವರ್ಷಗಳ ಕಾಲ ಒಬ್ಬರು ಒಂದೇ ಅನುಮತಿ ಪಡೆದು ಅದೇ ಅನುಮತಿಯನ್ನು ತೋರಿಸಿ ಲಾರಿಗಳಲ್ಲಿ ಕಲ್ಲನ್ನು ಸಾಗಿಸಕ್ಕಂಥ ದಂಧೆ ಇವತ್ತಿಗೂ ನಡೆಯುತ್ತಿದೆ. ನಾನು ಕೆಲವು ಪತ್ರಿಕಾಕರ್ತರನ್ನು ಚಾಮರಾಜನಗರದ ಕಡೆಗುಡ್ಡ ಪ್ರದೇಶಕ್ಕೆ ಕರೆದುಕೊಂಡು ಹೋದೆ. ಅಲ್ಲಿ ಕಲ್ಲನ್ನು ತೆಗೆದುಕೊಂಡು ಹೋಗುತ್ತಿದ್ದರು ಅಲ್ಲಿ ಕಲ್ಲು ಸಾಗಿಸುವ ಒಬ್ಬರನ್ನು ಈ ಕಲ್ಲಿನ ಬೆಲೆ ಎಷ್ಟು ಎಂದು ಕೇಳಿದೆವು. ಅವರು ಕಲ್ಲಿನ ಬೆಲೆ ೮೦೦ ರೂಪಾಯಿ ಎಂದು ಹೇಳಿದರು. ಲಾರಿ ಬಾಡಿಗೆ ಎಷ್ಟು ಎಂದು ಕೇಳಿದ್ದಕ್ಕೆ ೧೮೦೦ ರೂಪಾಯಿ ಸ್ವಾಮಿ ಎಂದು ಹೇಳಿದರು. ಇದು ಹೇಗಿದೆ ನೋಡಿ. ಕಲ್ಲಿನ ಬೆಲೆ ೮೦೦ ರೂಪಾಯಿ, ಲಾರಿ ಬಾಡಿಗೆ ೧೮೦೦ ರೂಪಾಯಿ. ಯಾವ ರೀತಿ ತಪ್ಪು ದಾರಿಗೆ ಎಳೆಯುತ್ತಾರೆ. ಯಾವ ರೀತಿ ಅಕ್ರಮ ಮಾಡುತ್ತಾರೆ ಎನ್ನುವುದಕ್ಕೆ ಇದು ಒಂದೇ ಅಲ್ಲ, ಇಂತಹ ಸಾವಿರಾರು ನಿದರ್ಶನಗಳು ಇವೆ. ಇವತ್ತು ನಾನು ಒಂದು ಮಾತು ಹೇಳಿದರೆ ಹೀಗೂ ಉಂಟೇ ಎಂದು ನಿಮಗೆ ಆಶ್ಚರ್ಯವಾಗಬಹುದು. ಇಲ್ಲಿ ಕುಮಾರ್ ಎಂಟರ್‌ಪ್ರೈಸಸ್ ಎನ್ನುವ ಒಬ್ಬ ಕಲ್ಲಿನ ಮಾಲೀಕ ಹೇಳುತ್ತಾನೆ. ಅವನಿಗೆ ಬೆಂಗಳೂರಿನ ಮಸಾಲೆ ದೋಸೆ ಚೆನ್ನಾಗಿರುವುದಿಲ್ಲವಂತೆ ಅವನು ನಡೆಯುತ್ತಾ ಮದ್ರಾಸ್‌ಗೆ ಹೋಗಿ ತಿಂಡಿ ತಿಂದು ಕೊಡು ಬರೋಣ ಅಲ್ಲಿ ಮಸಾಲೆ ದೋಸೆ ಚೆನ್ನಾಗಿರುತ್ತದೆ ಎಂದು ಹೇಳುತ್ತಾನಂತೆ. ಅಂದರೆ ಕಲ್ಲುಗಳು ಎಷ್ಟರಮಟ್ಟಿಗೆ ಇವರನ್ನು ಮದರಾಸ್ ದೋಸೆ ತಿನ್ನುವ ಮಟ್ಟಕ್ಕೆ ಮಾಡಿವೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ತಾವು ಮೊದಲು ಮಂಗಳೂರು ಬಂದರಿನಲ್ಲಿರತಕ್ಕಂಥ ಕಲ್ಲುಗಳ ಅಕೌಂಟ್ ಮಾಡಿಸಿ ನಾಳೆಯೇ ನಿಮ್ಮ ಅಕೌಂಟ್ ಡಿಪಾರ್ಟ್‌ಮೆಂಟಿನವರನ್ನು ಕರೆಸಿ ಅಲ್ಲಿ ಎಷ್ಟು ಕಲ್ಲಿದೆ ? ಅದರ ಮೌಲ್ಯ ಎಷ್ಟು, ಎಲ್ಲಿಂದ ಬಂದಿದೆ ಎಂದು ಲೆಕ್ಕ ಮಾಡಿಸಿ. ಅಲ್ಲಿಯವರೆಗೆ ಹಡಗು ಹೋಗುವುದನ್ನು ಸ್ವಲ್ಪ ನಿಲ್ಲಿಸಿ. ಮತ್ತು ಈ ಕಲ್ಲನ್ನು ಸಾಗಿಸತಕ್ಕೆ ಗುತ್ತಿಗೆ ದಾರರಿಗೂ ವಿದೇಶಿ ಕಂಪೆನಿಗಳಿಗೂ ಆಗಿರುವ ಕರಾರನ್ನು ತಾವು ದಯವಿಟ್ಟು ತರಿಸಿ. ಇಟಲಿ, ಜಪಾನ್, ಜರ್ಮನಿ ಮುಂತಾದ ಎಲ್ಲ ಕಡೆಗೂ ಈ ಕಲ್ಲುಗಳನ್ನು ಯಾವ್ಯಾವ ರೀತಿ ಸಾಗಿಸುತ್ತಿದ್ದಾರೆ ಅವರಿಗೂ ಇವರಿಗೂ ಆಗಿರತಕ್ಕ ಅಗ್ರಿಮೆಂಟ್ ಏನು ಎಂದು ಆ ಅಗ್ರಿಮೆಂಟನ್ನು ತರಿಸಿ ಸ್ವಲ್ಪ ಚೆಕ್ ಮಾಡಿ. ಅವರು ಎಷ್ಟು ಹಣ ಗಳಿಸಿದ್ದಾರೆ. ಆ ದುಡ್ಡು ಎಲ್ಲೆಲ್ಲಿ ಇಟ್ಟಿದ್ದಾರೆ. ಯಾರಿಗೆ ಖರ್ಚು ಮಾಡಿದ್ದಾರೆ ಎಂದು ನೋಡಿ. ಅವರಿಗೂ ಗುತ್ತಿಗೆ ದಾರರಿಗೂ ಆಗಿರತಕ್ಕ ಅಗ್ರಿಮೆಂಟ್ ಇದೆಯೆಲ್ಲ ಅದನ್ನು ದಯವಿಟ್ಟು ತರಿಸಿ. ಇಂತಹ ಅನೇಕ ಎಡರು ತೊಡರುಗಳಿಂ....

ಅಧ್ಯಕ್ಷರು..—ಈ ನಿರ್ಣಯಕ್ಕೆ ಸದನದ ಕಾರ್ಯಕಲಾಪಗಳ ಸಮಿತಿ ಎರಡು ಗಂಟೆಗಳ ಕಾಲ ಅವಕಾಶವನ್ನು ಮಾಡಿಕೊಟ್ಟಿದೆ. ಈಗಾಗಲೇ ಸುಮಾರು ನಾಲ್ಕು ಗಂಟೆಗಳ ಮೇಲೆ ಇದರ ಡಿಸ್ಕಷನ್ನಾಗಿದೆ. ಕಳೆದ ಶುಕ್ರವಾರ ಒಂದು ಗಂಟೆ ಳಿಗೆ ನಿಮಿಷ, ಮಾರ್ಚ್ ತಿಂಗಳಲ್ಲಿ ೧೦ ನಿಮಿಷ. ಈಗ ಸುಮಾರು ೪೦ ನಿಮಿಷ ಆಗಿದೆ. ಇದಕ್ಕೆ ಇನ್ನೂ ಹೆಚ್ಚು ಕಾಲಾವಕಾಶ ಮಾಡಬೇಕೆಂದು ಸದನ ಅಪೇಕ್ಷೆ ಪಟ್ಟರೆ...

ಒಬ್ಬ ಮಾನ್ಯ ಸದಸ್ಯರು.—ನವಂಗೂ ೧೦ ನಿಮಿಷ ಟೈಮ್ ಕೊಡಿ.

ಶ್ರೀ ಎಂ.ಪಿ. ವೆಂಕಟೇಶ್ ಮಾನ್ಯ ವಾಟಾಳ್ ನಾಗರಾಜರವರದು ಆದ ಮೇಲೆ ನನಗೆ ಒಂದು ಗಂಟೆ ಅವಕಾಶ ಕೊಡುತ್ತೇನೆಂದು ತಾವು ಈಗಾಗಲೇ ಹೇಳಿದ್ದೀರಿ.

ಅಧ್ಯಕ್ಷರು —ಕೇಳಿತಕ್ಕಂಥಾದ್ದು ತಮ್ಮ ಹಕ್ಕು. ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಇನ್ನೂ ಅನೇಕ ಸಮಸ್ಯೆಗಳನ್ನು ತರಬೇಕಾಗಿದೆ. ಈಗ ಸುಧಾ ಪತ್ರಿಕೆ ಇದೆ ನೋಡಿ ಇದರಲ್ಲಿ ಏನೇನಿದೆ ಎಂದು ನೀವೇ ನೋಡಿ, ನಿಮಗೆ ಕೊಡುತ್ತೇನೆ. ಸ್ವಾಮಿ, ಈ ಬಗ್ಗೆ ತಾವು ಸಮಗ್ರವಾಗಿ ಅನುಮತಿ ಕೊಡುವುದನ್ನು ಮೊದಲಂ ಸ್ವಲ್ಪ ತಡೆಹಿಡಿಯಿರಿ. ಒಂದು ಸಮಿತಿ ಮಾಡಿ ಆದರಲ್ಲಿ ಪರಿಶೀಲನೆ ಮಾಡಿ. ಅನಂತರ

ತಾವು ರಾಜ್ಯದ ಕಲ್ಲುಗಣಿಗಳನ್ನೆಲ್ಲ ಸಂದರ್ಶನ ಮಾಡಿ, ಮೊದಲು ಮಂಗಳೂರು ಬಂದರಿನಲ್ಲಿ ಲೆಕ್ಕ ಹಾಕಿ. ನಂತರ ಇಳಕಲ್ಲಿಗೆ ಬನ್ನಿ. ಈ ಕಲ್ಲುಗಳು ಲೂಟಿ ಆಗಿರುವ ಕಡೆಯೆಲ್ಲ ಸಚಿವರ ಯಾತ್ರೆ ನಡೆಯಲಿ. ತಾವು ವಿದೇಶಕ್ಕೆ ಹೋಗುತ್ತೀರೆಂದು ಕೇಳಿದೆ. ವಿದೇಶಕ್ಕೆ ಹೋಗುವ ಮೊದಲೇ ಯಾತ್ರೆ ನಡೆಸುವುದಾದರೆ ನಡೆಸಿ, ಇಲ್ಲದೇ ಹೋದರೆ ವಿದೇಶದಿಂದ ಬಂದ ಮೇಲಾದರೂ ನಡೆಸಿ ಆದರೆ ನೀವು ಹೋಗುವ ಮುಂಚೆ ಸರ್ಕಾರದ ಆಜ್ಞೆಯಿದೆಯಲ್ಲ ಅದು ಚಾಲು ಆಗಬಾರದು, ಅದನ್ನು ನಿಲ್ಲಿಸಿ, ಆದರೆ ಯಾರು ಏನೇ ಹೇಳಲಿ ನಾವು ಕಲ್ಲುಗಳನ್ನು ಕೊಟ್ಟೇ ಕೊಡುತ್ತೇವೆ ಎನ್ನತಕ್ಕಂಥ ನಿರ್ಧಾರಕ್ಕೆ ತಾವು ಬಂದ ಹಾಗೆ ಕಾಣುತ್ತದೆ. ಆ ನಿರ್ಧಾರದಲ್ಲಿ ತಾವು ದಯವಿಟ್ಟು ಬದಲಾವಣೆ ಆಗಲೇಬೇಕು. ಈ ಒಂದು ಕ್ರಮಕ್ಕೆ ರಾಜ್ಯದ ಜನತೆ ಶಪಿಸುತ್ತಾರೆ. ನಿಸರ್ಗ ಪ್ರೇಮಿಗಳೂ ಸಹ ತಮ್ಮನ್ನು ಕ್ಷಮಿಸುವುದಿಲ್ಲ. ಇಂಥ ಅನೇಕ ವಿಚಾರಗಳು ತಲೆಯಿತ್ತುತ್ತವೆ. ಆದ್ದರಿಂದ ತಾವು ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡಬೇಕು, ಮತ್ತು ಇದರ ಹಿಂದೆ ಯಾರ್ಯಾರು ಪ್ರಭಾವಯುತ ವ್ಯಕ್ತಿಗಳು ಇದ್ದಾರೆ, ಅವರು ಕಲ್ಲುಗಳನ್ನು ತೆಗೆಯುವುದಕ್ಕೆ ತರಾತುರಿಯಲ್ಲಿ ಅನುಮತಿಯನ್ನು ಪಡೆಯುವುದಕ್ಕೆ ಎಷ್ಟು ಕೆಲಸ ಮಾಡಿದ್ದಾರೆ ಎಂದರೆ ಭಾರಿ ಪರಿಣಾಮಕಾರಿಯಾದ ಕೆಲಸ ಮಾಡಿದ್ದಾರೆ. ಅವರೇನು ಕಡಿಮೆ ಕೆಲಸ ಮಾಡಿದ್ದಾರೆಂದು ತಿಳಿದುಕೊಳ್ಳಬೇಡಿ. ಏನು ಈ ಅವ್ಯವಹಾರ ನಡೆದಿದೆ. ನೀವು ಇಲ್ಲ ಎಂದರೂ ಪ್ರಾಮಾಣಿಕವಾಗಿ ಈ ಅವ್ಯವಹಾರ ನಡೆದುಹೋಗಿದೆ. ದೊಡ್ಡ ಅವ್ಯವಹಾರವೇ ನಡೆದಿದೆ.

ಶ್ರೀ ಎಂ. ಮಹಾದೇವ್.—ಅಧ್ಯಕ್ಷರೆ, ಈ ಕಲ್ಲು ಗಣಿ ಅವ್ಯವಹಾರದಲ್ಲಿ ತಮಗೆ ಏನಾದರೂ ಹೆಚ್ಚಿಗೆ ವಿಷಯ ತಿಳಿದಿದ್ದರೂ ತಿಳಿಸಿ. ಏಕೆಂದರೆ ಯಾವುದೋ ಒಂದು ಪತ್ರಿಕೆಯಲ್ಲಿ ನನ್ನ ಹೆಸರು, ಅಧ್ಯಕ್ಷರ ಹೆಸರು ಎಲ್ಲ ಬಂದಿದೆ. ಅದಕ್ಕೂ ನಮಗೂ ಕನಸಿನಲ್ಲೂ ಯಾವ ಸಂಬಂಧವೂ ಇಲ್ಲ. ಪ್ರಭಾವ ರಾಜಕಾರಣ ಅಥವಾ ಅವರ ಮಕ್ಕಳ ಹೆಸರಿನಲ್ಲಾದರೂ ಹಿಂದಿನಿಂದಲೂ ಈ ರೀತಿ ವ್ಯವಹಾರ ನಡೆದಿರುವ ಬಗ್ಗೆ ಹೆಸರುಗಳು ಏನಾದರೂ ಗೊತ್ತಿದ್ದರೆ ಅದನ್ನು ಬಹಿರಂಗಪಡಿಸಿ. ಕ್ರಮ ಎದುರಿಸುವುದಕ್ಕೆ ನಾವುಸಿದ್ಧವಾಗಿದ್ದೇವೆ.

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರು ಪರ್ಮಿಷನ್ ಕೊಟ್ಟರೆ ನಾನು ಎಲ್ಲವನ್ನೂ ಹೇಳುತ್ತೇನೆ. ಯಾರ ಮೇಲಾದರೂ ಆಪಾದನೆ ಮಾಡಬೇಕಾದರೆ ಮೊದಲೇ ನೋಟಿಸ್ ಕೊಡಬೇಕೆಂದು ಅಧ್ಯಕ್ಷರು ಹೇಳಿದ್ದಾರೆ. ಇದಕ್ಕೆ ರುಜುವಾತು ಎಲ್ಲಿರುತ್ತದೆ. ಈ ವ್ಯವಹಾರವೆಲ್ಲ ಚೆಕ್ ಮುಖಾಂತರ ಆಗುವುದಿಲ್ಲ. ಬ್ಯಾಂಕರ್ಸ್ ಹುಂಡಿಯಲ್ಲಿ ಹಾಗೆಯೇ ಹೋಗುತ್ತದೆ. ಇದೆಲ್ಲ ನಡೆದು ಕೊಂಡು ಬಂದಿರುವುದು. ಆದಲ್ಲ. ಪ್ರೂವ್ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರು ಒಂದು ಗಂಟೆ ಅವಕಾಶ ಕೊಟ್ಟರೆ, ಇದು ಯಾರ ಮುಖಾಂತರ ನಡೆದಿದೆ ಏನಾಗಿದೆ, ಯಾರಿಗೆ ಎಷ್ಟು ಲೀಸ್‌ಗೆ ಕೊಡುತ್ತೀರಿ ಎನ್ನುವುದನ್ನು ಹೇಳುತ್ತೇನೆ. ಈ ಅಮೆಂಡ್‌ಮೆಂಟ್ ೨೨ನೇ ತಾರೀಖು ಆಗಿದೆ, ಮಾರನೇ ದಿವಸವೇ ೫೦ ಅರ್ಜಿಗಳನ್ನು ಹಾಕಿದ್ದಾರೆ. ಒಂದೇ ಕಂಪನಿಯವರು ೬೮ ಅರ್ಜಿಗಳನ್ನು ಹಾಕಿದ್ದಾರೆ. ಈ ಕಾನೂನು ಹೀಗೇ ಮಾಡಬೇಕೆಂದು ಫಾರಿನ್‌ಗೆ ಹೋಗಿ ಆರ್ಡರ್ ತಂದಿದ್ದಾರೆ. ಈ ಗಲಾಟೆ ಯಿದ್ದರಿಂದ ಅವರನ್ನೂ ದಂಡುಕೊಟ್ಟಿಲ್ಲ, ಇಲ್ಲದೇ ಹೋದರೆ ಈಗಾಗಲೆ ಅವರು ಆಡ್ವಾನ್ಸನ್ನೂ ಕೊಟ್ಟು ಬಿಡುತ್ತಿದ್ದರು. ಒಂದು ಕಂಪನಿ ಮಾಲೀಕರು ಫಾರಿನ್‌ಗೆ ಹೋಗಿ...

ಅಧ್ಯಕ್ಷರು.—ನಿಮ್ಮ ಟರ್ನ್ ಬಂದಾಗ ಹೇಳಿ.

ಶ್ರೀ ಆರ್. ದಯಾನಂದರಾವ್.—ಅವರು ಒಂದೇ ಸಬ್ಜೆಕ್ಟ್ ಮೇಲೆ ಇಷ್ಟೊಂದು ಇಂಟರೆಸ್ಟ್ ಕೊಟ್ಟು ಮಾತನಾಡುತ್ತಿದ್ದಾರೆ. ಇದರಲ್ಲಿ ಏನಾದರೂ ವ್ಯಾಪಾರ ಕುದುರಿದೆಯೋ ?

ಅಧ್ಯಕ್ಷರು.—ಚರ್ಚೆ ಕುದುರಿದೆ ಅಷ್ಟೆ, ವ್ಯಾಪಾರ ಕುದುರಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಅವರಿಗೆ ನೀವೇ ಸರಿಯಾದ ಉತ್ತರ ಕೊಟ್ಟಿದ್ದೀರಿ, ಬಹಳ ಸಂತೋಷ. ನಾನು ಯಾರದೇ ನೇಮ ಮಾಡಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಕೆಲಸವನ್ನು ಯಾರೇ ಮಾಡಿರಬಹುದು. ಅಂತೂ ಅನ್ಯಾಯ ನಡೆದಿದೆ. ಭ್ರಷ್ಟಾಚಾರ ಇಲ್ಲದೆ ಸರ್ಕಾರ ಅನುಮತಿ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಇದರಲ್ಲಿ ಅನುಮಾನವೇ ಇಲ್ಲ. ಸಚಿವ ಸಂಪುಟದಲ್ಲಿ ಇನ್ನೂ ಅನೇಕ ವಿಚಾರಗಳು ಇರುವಾಗ. ಈ ಸಭೆಯಲ್ಲಿ ಒಂದು ನಿರ್ಣಯ ಇರುವಾಗ, ಇನ್ನೂ ಅನೇಕ ವಿಚಾರಗಳನ್ನು ಇದರ ಬಗ್ಗೆ ಮಾತನಾಡುತ್ತಿರುವಾಗ ಇಷ್ಟು ತರಾತುರಿಯಲ್ಲಿ ಅನುಮತಿ ಕೊಡಬೇಕಾದರೆ ಇದು ಸುಮ್ಮನೆ ಕನಸಿನಲ್ಲಿ ಆದದ್ದಲ್ಲ. ಇದು ನಡೆದಿದೆ. ನಾನು ಪ್ರಾಮಾಣಿಕವಾಗಿ ಇದರಲ್ಲಿ ಇಂತಿಂಥವರು ಇದ್ದಾರೆ ಎಂದು ಎಲ್ಲ ಹೇಳಬೇಕಾಗುತ್ತದೆ. ಸಮಗ್ರವಾಗಿ ಇದಕ್ಕೆ ಅನುಮತಿ ಕೊಡಬೇಕಾದರೆ ಭ್ರಷ್ಟಾಚಾರ ನಡದೇ ಇದೆ. ಆದರಲ್ಲಿ ಏನೂ ಅನುಮಾನಪಡುವುದಕ್ಕೆ ಹೋಗಬೇಡಿ. ಈ ಗ್ರಾನೈಟ್‌ನವರೆ ಒಂದು ಲಿಮಿಟೆಡ್ ಕಂಪನಿ ಮಾಡಿಕೊಂಡು ಯಾವರೀತಿ ಮಾಡಿದ್ದಾರೆ ಯಾವರೀತಿ

ನಡೆದಿದ್ದಾರೆಂದು ಗೊತ್ತಾಯಿತು. ನಾನು ತಮ್ಮನ್ನು ವಿತಕ್ಕೆ ಕೇಳುತ್ತಿದ್ದೇನೆಂದರೆ, ದಯಮಾಡಿ ಆದನ್ನು ನೋಡಬೇಕು. ನೀವು ಬ್ರಹ್ಮಚಾರಿಗಳು, ನಿಜ. ನೀವು ಒಂದು ಆಯೋಗವನ್ನು ರಚನೆ ಮಾಡಿ. ಈ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ಪೂರ್ತಿ ಸ್ವಾಪ್ ಮಾಡಿ. ಈಗ ಕೊಟ್ಟಿರತಕ್ಕಂಥ ಕಲ್ಲುಗಳನ್ನು ನಿಲ್ಲಿಸಿ, ನಾವು ನಾಳೆಯಿಂದ ಕೊಡುವುದಿಲ್ಲ, ಕರ್ನಾಟಕ ರಾಜ್ಯದಲ್ಲಿ ಯಾವುದೇ ಮೂಲೆಯಲ್ಲೂ ಈ ತರಹ ಒಂದು ಗ್ರಾನೈಟ್ ಕಲ್ಲನ್ನು ತೆಗೆದರೆ ಇಷ್ಟು ಶಿಕ್ಷೆ ಎನ್ನತಕ್ಕಂಥದ್ದರ ಬಗ್ಗೆ ಈ ಸಭೆಯಲ್ಲಿ ಒಂದು ಕಾಯ್ದೆಯನ್ನು ತೆಗೆದುಕೊಂಡು ಬನ್ನಿ. ಹಾಗಾದರೆ ನೀವು ಜಮ್ ಗ್ರಾನೈಟ್ ನವರಿಗೆ ೫೦ ಎಕರೆಯನ್ನು ಹೇಗೆ ಕೊಟ್ಟಿರಿ. ದೊಡ್ಡಣ್ಣನವರಿಗೆ ೫೦ ಎಕರೆಯನ್ನು ಹೇಗೆ ಕೊಟ್ಟಿರಿ? ನೀವು ಕೊಟ್ಟಿದ್ದೀರಿ ಅಂದರೆ ಹೇಗೆ ಬಿಟ್ಟಿದ್ದೀರಿ ಎಂದು ಅರ್ಥ. ನೀವು ಲೈಸೆನ್ಸ್ ಕೊಟ್ಟಿರಿ, ೫೦-೫೦ ಎಕರೆಯಂತೆ ೧೫೦೦ ಎಕರೆ ಪ್ರದೇಶದಲ್ಲಿ ಇಳಕಲ್‌ನಲ್ಲಿ ಇವತ್ತು ಕಲ್ಲುಗಳನ್ನು ತೆಗೆಯುತ್ತಿದ್ದಾರೆ. ಜಮ್ ಗ್ರಾನೈಟ್, ದೊಡ್ಡಣ್ಣನವರ ಕಂಪನಿ, ಓರಿಯೆಂಟಲ್ ಇವು ಬಹಳ ಪ್ರಮುಖವಾದಂಥ ದೊಡ್ಡ ಕಂಪನಿಗಳು. ಇಳಕಲ್‌ನಲ್ಲಿ ಸುಮಾರು ಒಂದೂವರೆ ಸಾವಿರ ಎಕರೆ ಪ್ರದೇಶದಲ್ಲಿ ಇದೇ ಒಂದು ದೊಡ್ಡ ಭೂತಕಾರವಾಗಿ ಸೃಷ್ಟಿಯಾಗಿದೆ. ಅಲ್ಲಿ ಒಂದರಲ್ಲೇ ೫೦ ರಿಂದ ೬೦ ಲಾರಿಗಳ ಮೇಲೆ ಪ್ರತಿ ದಿನ ಹೋಗುತ್ತಿರುತ್ತದೆ, ಅದು ಕಾರವಾರದ ಮೂಲಕ ಬಂದರಿಗೆ ಹೋಗುತ್ತದೆ. ಅದನ್ನು ನಾನು ನೋಡಿದ್ದೇನೆ. ನಾನು ಕಾರವಾರ ರಸ್ತೆಗೆ ಹೋಗಿ ನೋಡಿದ್ದೇನೆ ಕಾರವಾರದ ಕಡೆಗೆ ಹೋಗಿದ್ದೇನೆ. ಮತ್ತು ಇಳಕಲ್‌ನಲ್ಲಿಯೂ ಕೂಡಾ ನೋಡಿದ್ದೇನೆ. ಏಕೆ ಇಷ್ಟು ವಿಷಯವನ್ನು ಕೈಗೆ ತೆಗೆದುಕೊಳ್ಳಬೇಕು ಎಂದರೆ ಇದೆಲ್ಲವನ್ನೂ ನಾನು ನೋಡಿದ್ದೇನೆ, ಕಣ್ಣಾರೆ ನೋಡಿ ತಿಳಿದು ಬಂದಿದ್ದೇನೆ, ಸುಮ್ಮ ಸುಮ್ಮನೆ ಹೇಳುವುದಿಲ್ಲ, ಇದರ ಬಗ್ಗೆ ಮೂರು-ನಾಲ್ಕು ವರ್ಷಗಳಿಂದ ನಾನು ಸತತವಾಗಿ ಹೋರಾಟ ಮಾಡಿದ್ದೇನೆ. ಸಮಗ್ರವಾದ ಚಿತ್ರಣ ನನ್ನ ಕೈಯಲ್ಲಿದೆ. ಯಾರ್ಯಾರು ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನುವುದು ನನಗೆ ಗೊತ್ತು. ನಿವೃತ್ತ ಅಧಿಕಾರಿಗಳನ್ನು ಬಿಟ್ಟರೆ ಹಿಂದೆ ಇದ್ದಂಥ ಅನೇಕ ಜನ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿರತಕ್ಕಂಥ ಜನ ಆ ಕಂಪನಿಗಳಲ್ಲಿ ಪಾಲುದಾರರಾಗಿದ್ದಾರೆ. ನೀವು ತನಿಖೆ ನಡೆಸಿದರೆ ಎಲ್ಲಾ ಹೊರಗೆ ಬರುತ್ತದೆ ನಮ್ಮ ಮೈಸೂರು ಮಿನರಲ್ಸ್ ಲಿಮಿಟೆಡ್ ಬಗ್ಗೆ ನಾನು ಹೇಳುತ್ತಿದ್ದೇನೆ ಇದು ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರತಕ್ಕಂಥ, ಕಳಂಕ ತರತಕ್ಕಂಥ ಸಂಸ್ಥೆಯಾಗಿದೆ. ಇಳಕಲ್‌ನಲ್ಲಿ ಅವರದು ಕೂಡಾ ಉಂಟು. ಆದರೆ ಕಲ್ಲನ್ನು ತೆಗೆಯುವುದು ಎಂದರೆ, ಉದಾಹರಣೆಗೆ ೫೦ ಕ್ಯೂಬಿಕ್ ಮೀಟರ್ ಕಲ್ಲನ್ನು ತೆಗೆದು ಮೇಲೆ ಇಟ್ಟರೆ ಮೂರು ಕ್ಯೂಬಿಕ್ ಮೀಟರನ್ನು ಇಟ್ಟುಕೊಂಡು ೪೭ ಕ್ಯೂಬಿಕ್ ಮೀಟರನ್ನು ಈ ಪಾಸಗಿ ಗುತ್ತಿಗೆದಾರರಿಗೆ ಮಾರಿಬಿಡುತ್ತಾರೆ. ಅವರು ಅದರಲ್ಲಿ ಹಣವನ್ನು ತೆಗೆದುಕೊಂಡು ಬಿಡುತ್ತಾರೆ. ಈ ಪ್ರಕಾರ ಎಂ. ಎಂ. ಎಲ್. ಅವರದು ಎಲ್ಲೆಲ್ಲಿದೆ ಸಮಗ್ರವಾಗಿ ಎಲ್ಲಾ ಕಡೆಯಲ್ಲಿಯೂ ನಡೆದಿದೆ. ಇನ್ನೊಂದು ವಿಚಾರ ಎಂದರೆ, ಹಿಂದೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮೇಲೆ ಸಿ. ಓ. ಡಿ. ತನಿಖೆಯಾಯಿತು ತಾವು ದಯಮಾಡಿ ಆ ವರದಿಯನ್ನು ತರಿಸಿ. ಅದು ಹಳೆಯ ರೆಕಾರ್ಡ್‌ನಲ್ಲಿದೆ, ಅದನ್ನು ತರಿಸಿ. ಯಾರ್ಯಾರು ಏನೂ ಮಾಡಿದ್ದಾರೆ, ಏನು ಮಾಡಿದ್ದಾರೆ ಎನ್ನತಕ್ಕಂಥ ಕೆಲವು ಅಂಶಗಳು ಸಿ ಓ ಡಿ ತನಿಖಾ ವರದಿಯಲ್ಲಿದೆ. ಇವತ್ತು ತಾವು ಒಂದು ಉನ್ನತವಾದಂಥ ತನಿಖೆಯನ್ನು ಪ್ರಾರಂಭ ಮಾಡಿದರೆ ಇದರಲ್ಲಿ ಬರೀ ಇಲಾಖೆಯವರು ಮಾತ್ರವಲ್ಲದೆ ಅಕ್ರಮ ಒಂದೇ ಅಲ್ಲ, ಇದರ ಹಿಂದೆ ಯಾರ್ಯಾರು ಪ್ರಭಾವವನ್ನು ಬೀರಿದ್ದಾರೆ, ಅವರದೆಲ್ಲಾ ಸಮಗ್ರವಾಗಿ ಹೊರಗಡೆ ಬರಲಿ ಎಂದು ತಮಗೆ ನಾನು ಹೇಳುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಅಂದರೆ ಇದರಲ್ಲಿ ಅರಣ್ಯ ಇಲಾಖೆಯೂ ಕೂಡಾ ಬರುತ್ತದೆ, ಇದರ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಕಲ್ಲನ್ನು ತೆಗೆಯುತ್ತಿದ್ದಾರೆ. ಮುಜರಾಯಿ ಇಲಾಖೆ ಬರುತ್ತದೆ. ಅಲ್ಲಿ ತೆಗೆಯುತ್ತಿದ್ದಾರೆ, ರೆವಿನ್ಯೂ ಇಲಾಖೆ ಬರುತ್ತದೆ, ಅಲ್ಲಿ ಕಲ್ಲನ್ನು ತೆಗೆಯುತ್ತಿದ್ದಾರೆ. ಒಂದೊಂದು ಇಲಾಖೆಗೂ ಕಾಯ್ದೆಗಳು ಬೇರೆ ಬೇರೆ ಇದೆ. ಮುಜರಾಯಿಗೆ ಬೇರೆ, ರೆವಿನ್ಯೂ ಭೂಮಿಗಳಿಗೆ ಬೇರೆ, ನಮ್ಮ ಅರಣ್ಯ ಇಲಾಖೆಗೆ ಬೇರೆ. ಈ ರೀತಿ ಒಂದಕ್ಕೊಂದು ಕಾಯ್ದೆಗಳೇ ಬೇರೆ ಇರುವಾಗ ಇವತ್ತು ಇದಕ್ಕೆ ಪರಿಣಾಮಕಾರಿಯಾದಂಥ ಒಂದು ಕಾಯ್ದೆ ಕೂಡಾ ಇಲ್ಲ. ಅದು ಇಲ್ಲವೇ ಇಲ್ಲ. ಹಿಂದೆ ಇದ್ದಂಥ ಅನೇಕ ಜನ ಗಣಿ ಮತ್ತು ಭೂ ವಿಜ್ಞಾನ ಖಾತೆಯ ಸಚಿವರುಗಳು ಹೇಳುತ್ತಿದ್ದರು. ಅವರು ಬಂದ ತಕ್ಷಣವೇ ಈ ಕಾಯ್ದೆಯನ್ನು ಬದಲಾವಣೆ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಹೋದ ಸಭೆಯಲ್ಲಿ ಒಂದು ಮಾತನ್ನು ನಾನು ಹೇಳುವಾಗ ತಾವು ಇರಲಿಲ್ಲ. ಈಗ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಬ್ಬ ಉನ್ನತವಾದಂಥ ಐ. ಎ. ಎಸ್. ಅಧಿಕಾರಿ ಅವರನ್ನು ಕರೆದು ತಾವು ಕೇಳಿ ಎಂದು ಹೇಳಿದ್ದೆ. ಆಮೇಲೆ ತನಿಖೆಯನ್ನು ನಡೆಸಿ ಎಂದು ಹೇಳಿದ್ದೆ. ಮುದಗೋಪಾಲ್ ಎಂಬುವರ ಹೆಸರನ್ನು ತಾವು ಕೇಳಿರಬಹುದು. ಅವರು ಬಹಳ ಒಳ್ಳೆಯ ಅಧಿಕಾರಿ ನಂಜನಗೂಡಿನಲ್ಲಿ...

ಅಧ್ಯಕ್ಷರು.—ತಾವು ಹೇಳಿದ್ದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಇವತ್ತಿಗೂ ಈ ಕ್ಷಣಕ್ಕೂ ಆ ಅಧಿಕಾರಿಯನ್ನು ಕರೆಯಿರಿ ಸ್ವಾಮಿ ಅವರು ಒಂದು ಪ್ರದೇಶದ ಮೂಲ ತಪ್ಪಿಗೆ ಹೇಳುತ್ತಾರೆ.

ಅಧ್ಯಕ್ಷರು.—ಅವರು ಕರೆದಿಲ್ಲ ಎಂದು ನಿಮಗೆ ಹೇಗೆ ಗೊತ್ತು ?

ಶ್ರೀ ವಾಟಾಳ್ ನಾಗರಾಜ್.—ನನಗೆ ಗೊತ್ತಿದೆ. ತಾವು ಕೇಳಿ. ನಾನು ಸುಮ್ಮನೆ ಕುಳಿತು ಕೊಳ್ಳುವುದಿಲ್ಲ. ನಾನು ಎಲ್ಲಾ ಕಡೆಗೂ ಹೋಗುತ್ತೇನೆ. ನಿಮ್ಮ ಪರಿಸ್ಥಿತಿ ಏನು ? ಇಲ್ಲಿ ಏನಾಗಿದೆ? ನಾನು ಇಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ, ದಯವಿಟ್ಟು ತಪ್ಪಿಲ್ಲಿ ಹೇಳುತ್ತಿದ್ದೇನೆ. ಇಲಾಖೆಗಳು ಬೇರೆ ಬೇರೆ ಆದರೂ ಕಾಯ್ದೆಗಳು ಬದಲಾಣೆಯಾಗಿಲ್ಲ.

ಇದರ ಬಗ್ಗೆ ಅನೇಕರು ಹೈಕೋರ್ಟಿಗೆ ಹೋಗಿ ತಡೆ ಆಜ್ಞೆ ತಂದಿದ್ದಾರೆ. ಅವರು ಈ ತಡೆ ಆಜ್ಞೆ ತಂದಾಗ ನಮ್ಮ ಸರ್ಕಾರದ ಕರ್ತವ್ಯ ಏನು ? ಈ ಸಭೆಯಲ್ಲಿ ಆ ಕಾಯಿದೆಯ ಬದಲಾವಣೆಗೆ ಒಂದು ಮಸೂದೆಯನ್ನು ತರಬೇಕು ತಂದು ಕಾಯಿದೆಯನ್ನು ಬದಲಾವಣೆ ಮಾಡದೆ ಇದರ ಬಗ್ಗೆ ಚರ್ಚೆಯೂ ನಡೆಯದೆ ತಾವು ಏಕಾ ಏಕಿಯಾಗಿ ಯಾರೂ ಅರ್ಜಿ ಹಾಕುತ್ತಾರೆ ಅವರಿಗೆಲ್ಲ ೧೦ ವರ್ಷಗಳ ಕಾಲ ಗುತ್ತಿಗೆ ಕೊಟ್ಟುಬಿಡಬಹುದು ಎಂದು ಹೇಳಿದ್ದೀರಿ. ಮೊದಲಂ ಈ ಒಂದು ಸಿಡಿಮದ್ದನ್ನು ತಯಾರು ಮಾಡುವುದೇ ಒಂದು ಅಪರಾಧ. ಈ ಸಿಡಿಮದ್ದನ್ನು ತಯಾರು ಮಾಡಬೇಕಾದರೆ, ಡೈನಾಮೈಟನ್ನು ತಯಾರು ಮಾಡಬೇಕಾದರೆ ಅದಕ್ಕೆ ವಿಶೇಷವಾದ ಅನುಮತಿ ಬೇಕೇ ಬೇಕು. ಒಂದು ಗಣಿಯಲ್ಲಿ ಒಂದು ದಿನದಲ್ಲಿ ಕನಿಷ್ಟ ೧೦೦—೧೫೦ ಸಿಡಿಮದ್ದುಗಳನ್ನು ಸಾರೋದ್ದಾರವಾಗಿ ಸಿಡಿಸಂತ್ತಾರೆ. ನನ್ನ ಪ್ರಕಾರ ರಾಜ್ಯದಲ್ಲಿ ಒಂದು ಸಾವಿರ ಗಣಿಗಳಿವೆ. ಅಂದ ಮೇಲೆ ಎಷ್ಟು ಸಿಡಿಮದ್ದುಗಳನ್ನು ಸಿಡಿಸುತ್ತಾ ಇರಬಹುದು. ಒಂದು ಕಡೆ ಸಿಡಿಮದ್ದುಗಳನ್ನು ತಯಾರು ಮಾಡುವುದಕ್ಕೆ ಲೈಸೆನ್ಸ್ ಬೇಕು ಮತ್ತು ಸಿಡಿಮದ್ದುಗಳನ್ನು ಒಡೆಯುವುದೂ ಸಹ ಒಂದು ಅಪರಾಧ. ಈ ಅಪರಾಧ ಎಲ್ಲಾ ಕಡೆ ಎಷ್ಟು ನಡೆಯುತ್ತಿದೆ. ಒಂದು ಅರಣ್ಯ ಪ್ರದೇಶದಲ್ಲಿ ಈಗ ಸಿಡಿಮದ್ದನ್ನು ಸಿಡಿಸಿದರೆ ಅಲ್ಲಿರತಕ್ಕ ವನ್ಯ ಮೃಗಗಳಿಗೆ ತೀವ್ರ ತೊಂದರೆ ಆಗುತ್ತದೆ. ಅದನ್ನು ಯಾರೂ ಗಮನಿಸಲಿಲ್ಲ. ಇಳಕಲ್‌ನಲ್ಲಿ ಸಿಡಿಮದ್ದು ಹಾಕಿ ಒಡೆದರೆ ಪಕ್ಕದಲ್ಲಿ ಒಂದು ದೊಡ್ಡ ಕೆರೆ ಇದೆ. ಸುಮಾರು ಸಾವಿರಾರು ಎಕರೆ ಪ್ರದೇಶಕ್ಕೆ ನೀರು ಕೊಡತಕ್ಕ ಕೆರೆ ಇದೆ. ಅದಕ್ಕೆ ನಾಗೂರ್ ಟ್ಯಾಂಕ್ ಎಂದು ಹೇಳುತ್ತಾರೆ, ಚಿಕ್ಕವಾಡಿ ಟ್ಯಾಂಕ್ ಎಂದು ಕೂಡಾ ಹೇಳುತ್ತಾರೆ. ಇಡೀ ರೈತರೆಲ್ಲ ಕೇಳಿದ್ದಾರೆ. ಅಲ್ಲಿ ನೀವು ಸಿಡಿಮದ್ದು ಹಾಕುವುದರಿಂದ ಟ್ಯಾಂಕಿಗೆ ಬಹಳ ತೊಂದರೆ ಆಗುತ್ತದೆ, ಟ್ಯಾಂಕ್ ಬಹಳ ಶಿಥಿಲವಾಗುತ್ತಿದೆ, ಇದನ್ನು ಸಮಗ್ರವಾಗಿ ನಿಲ್ಲಿಸಬೇಕು ಎಂದು ಇಡೀ ಸಮಗ್ರ ರೈತರು ಕೇಳಿದ್ದಾರೆ. ಆದನ್ನು ಇವೊತ್ತಿನವರೆಗೂ ನಿಲ್ಲಿಸುವುದಕ್ಕೆ ಆಗಿಲ್ಲ. ಒಬ್ಬ ಪೋಲೀಸ್ ಕೂಡ ಹೋಗಿ ತನಿಖೆ ನಡೆಸಿ ಕೇಸ್ ಹಾಕಲಿಲ್ಲ. ಅವರೂ ಸಹ ಯಾರು ಗಣಿಯಲ್ಲಿ ಕಲ್ಲುಗಳನ್ನು ತೆಗೆಯುತ್ತಿದ್ದಾರೆ, ಅವರ ಜೇಬಿಗೆ ಹೋಗಿದ್ದಾರೆ. ಅಲ್ಲಿರತಕ್ಕ ವೈದ್ಯರುಗಳು ಶವ ಪರೀಕ್ಷೆ ಮಾಡುವುದಿಲ್ಲ. ಕಲ್ಲಿನ ಕೆಳಗೆ ಸಿಕ್ಕ ಸತ್ತಿರತಕ್ಕ ವ್ಯಕ್ತಿಗಳ ಶವ ಪರೀಕ್ಷೆ ಮಾಡಿಲ್ಲ. ಇದುವರೆಗೆ ಶವ ಪರೀಕ್ಷೆ ಎಲ್ಲಿ ನಡೆದಿದೆ ಯಾರು ಸತ್ತಿಲ್ಲವೇನು? ಶಿವಗಂಗೆ ಹತ್ತಿರ ಸತ್ತಿರತಕ್ಕ ವ್ಯಕ್ತಿಯ ಮನೆಗೆ ನಾನು ಹೋಗಿದ್ದೇನೆ. ತಾವು ನಾಳೆ ಬನ್ನಿ. ಶಿವಗಂಗೆ ಪಕ್ಕದಲ್ಲಿ ಕಲ್ಲು ಒಡೆದು ಹಾಕುತ್ತಿರುವಾಗ ಕಲ್ಲು ಮೇಲೆ ಬೆಗಚಿ ಸತ್ತಿರತಕ್ಕವನ ಮನೆಗೆ ನಾನು ಹೋಗಿದ್ದೇನೆ.ಅವನಿಗೆ ೫ಸಾವಿರ ರೂಪಾಯಿ ಕೊಟ್ಟು ಬಾಯಿ ಮುಚ್ಚಿಕೊಂಡು ಇರು, ನೀನು ಏನೂ ಮಾತನಾಡಬೇಡ, ನೆಕ್ಸ್ಟ್ ಟೈಮ್ ಹಣ ಕೊಡುತ್ತೇವೆ ಎಂದು ಹೇಳಿದ್ದಾರೆ. ಇಂತಹ ಪ್ರಕರಣಗಳು ಸಮಗ್ರವಾಗಿ ನಡೆದಿವೆ. ಇದ್ಯಾವುದರ ಬಗ್ಗೆಯೂ ಚಿಂತನೆ ಇಲ್ಲವೇ ಇಲ್ಲ. ಒಂದನ್ನೂ ಚಿಂತೆ ಮಾಡದೆ, ಯಾವುದೇ ಪೂರ್ವಾಪರ ಯೋಚನೆ ಮಾಡದೇ ಲೈಸೆನ್ಸ್ ಕೊಟ್ಟರೆ ಏನು ಪರಿಸ್ಥಿತಿ ಆಗುತ್ತದೆ. ಇದು ಸರಿಯಾದ ನೀತಿ ಅಲ್ಲ. ಅದಕ್ಕೆ ನಾನು ಹೇಳುತ್ತೇನೆ. ದಯವಿಟ್ಟು ಈ ಒಂದು ಅನುಮತಿ ಕೊಡುವುದನ್ನು ನಿಲ್ಲಿಸಿ. ಖಂಡಿತವಾಗಿ ಅನುಮತಿಯನ್ನು ಕೊಡಬೇಡಿ, ಕೊಡುವುದನ್ನು ನಿಲ್ಲಿಸಿ. ನೀವು ಅನುಮತಿ ಕೊಡುವುದನ್ನು ನಿಲ್ಲಿಸದೇ ಇದೇ ರೀತಿ ಕೊಡುವುದಕ್ಕೆ ಹೋದರೆ ಇದು ಈ ರಾಜ್ಯಕ್ಕೆ ಶೋಭೆ ತರತಕ್ಕಂಥ ಪರಿಸ್ಥಿತಿ ಇಲ್ಲ. ಮತ್ತು ತಾವು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಕಾಪಿಯನ್ನು ತರಿಸಿ. ಆ ಜಡ್ಜ್‌ಮೆಂಟ್‌ನಲ್ಲಿ ಹೇಳಿದ್ದಾರೆ. ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಭಗವತಿ ಅವರು ಕೊಟ್ಟ ಜಡ್ಜ್‌ಮೆಂಟಿನಲ್ಲಿ ಮನುಷ್ಯ ಕುಲ ಜೀವಿಸಿರುವವರೆಗೂ ನಿಸರ್ಗ ಸಂಪತ್ತು ಇರಬೇಕು, ಇದು ಯಾರೊಬ್ಬರ ಸ್ವತ್ತಲ್ಲ. ಈ ಕಲ್ಲು ತೆಗೆಯಬಾರದು ಎಂದು ಏನೂ ಹೇಳಿದ್ದಾರೆ, ಅದರ ಬಗ್ಗೆ ತಾವು ನಿರಂತರವಾಗಿ ಯೋಚನೆ ಮಾಡಿ. ಆ ಜಡ್ಜ್‌ಮೆಂಟ್ ಕಾಪಿಯನ್ನು ತರಿಸಿ. ತಾವು ಈ ಎಲ್ಲಾ ಯೋಚನೆಗಳನ್ನು ಮಾಡಿ. ಎಲ್ಲಿ ಕಲ್ಲು ತೆಗೆಯಬೇಕು ಎನ್ನತಕ್ಕಂಥಾದ್ದನ್ನು ಆಮೇಲೆ ನಿರ್ಧರ ಮಾಡೋಣ. ಇದು ಯಾವುದೂ ಇಲ್ಲದೆ ತಾವು ಸೀದಾ

ಲೈಸೆನ್ಸ್ ಕೊಡುವುದಾದರೆ ಇದು ತೀರಾ ಅಕ್ರಮ ಆಗುತ್ತದೆ. ಬಹುಶಃ ಇದನ್ನು ಹಿಂತೆಗೆದುಕೊಳ್ಳಲಿ ಅಂದರೆ ನಾನಾ ರೀತಿಯ ಕಥೆಗಳು, ನಿಜಾಂಶಗಳು ಹೊರ ಬರುತ್ತವೆ. ಸರ್ಕಾರವನ್ನು ಇಕ್ಕಟಿಗೆ ಸಿಕ್ಕಿಸೆತಕ್ಕ ಪರಿಸ್ಥಿತಿ ಕೂಡ ಇದೆ. ಆದ್ದರಿಂದ ಕೂಡಲೇ ಈ ಕಾರ್ಯವನ್ನು ಮಾಡಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಂನವಿ ಮಾಡಿದ್ದೇನೆ. ಮೊನ್ನೆ ಮುಖ್ಯ ಮಂತ್ರಿಗಳು ಸಿಕ್ಕಿದಾಗ, ಇದು ಸರಿಯಿಲ್ಲ ಅನ್ಯಾಯ ನಡೆದಿದೆ, ತಮ್ಮ ಸರ್ಕಾರದಲ್ಲಿ ಇದು ತಮ್ಮ ಗಮನಕ್ಕೆ ಬರದೇ ಇರಬಹುದು, ಆದರೆ ತಮ್ಮ ಮೂಗಿನ ಕೆಳಗೆ ಇದು ನಡೆದು ಹೋಗಿದೆ ಎಂದು ಹೇಳಿದ್ದೇನೆ, ಇದು ನಡೆದಿದೆ. ಈ ಕಲ್ಲಿನ ಗುತ್ತಿಗೆದಾರರು ಸಾಮಾನ್ಯರಲ್ಲ. ಬಹಳ ದೊಡ್ಡ ದೊಡ್ಡ ಪ್ರಚಂಡರು.

ಶ್ರೀ ಸಿ. ಎಂ.

ಅವರೇನೂ ಕಡಿಮೆ ಎಂದು ತಿಳಿದುಕೊಳ್ಳಬೇಕಾಗಿಲ್ಲ, ಭಾರಿ ಪ್ರಚಂಡರು. ಇ. ರಮಣಿ ಎಂಬುವರು ಇದೇ ಊರಿನಲ್ಲಿ ಸಾಮಾನ್ಯ ವಕೀಲಿಗೆ ಬಂದವರು. ಇವತ್ತು ಜೆಂ. ಗ್ರಾನೈಟ್ ಏನಾಗಿದೆ ಎಂದು ತಾವು ನೋಡಬೇಕು. ಅವರು ಇಲ್ಲಿ ತೆಗೆಯುವುದಲ್ಲದೆ ತಮಿಳುನಾಡಿನಲ್ಲಿ ಅವರ ಕಾರ್ಖಾನೆಯಲ್ಲಿ ಇಟ್ಟಿರತಕ್ಕಂಥ ಕಲ್ಲುಗಳು ಎಷ್ಟು ಎಂದು ತನಿಖೆ ಮಾಡಿಸಿದರೆ ಗೊತ್ತಾಗುತ್ತದೆ. ತಮಿನಾಡಿನಲ್ಲಿ ಆ ಕಾರ್ಖಾನೆಯಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಇಟ್ಟಿದ್ದಾರಲ್ಲ ಅದನ್ನು ತೆಗೆಸಿ ನೋಡಿ. ಎಷ್ಟು ಬೆಲೆ ಬಾಳುತ್ತದೆ, ಎಂದು ತಿಳಿಯುತ್ತದೆ. ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಪರಿಸರದ ಬಗ್ಗೆ ಮಾತನಾಡುತ್ತಾ ಇದ್ದೇವೆ, ಅನೇಕ ವಿಚಾರಗಳ ಬಗ್ಗೆ ಮಾತನಾಡುತ್ತೇವೆ ವಾತಾವರಣ ಕಲುಷಿತವಾಗಿರುವ ಬಗ್ಗೆ ಮಾತನಾಡುತ್ತಾ ಇದ್ದೇವೆ. ರಾಜ್ಯದಲ್ಲಿ ಪರಿಸರ ಶುದ್ಧವಾಗಿರಬೇಕು ಎಂದು ಹೇಳುತ್ತಾ ಇದ್ದೇವೆ. ಪರಿಸರ ದಿನಾಚರಣೆ ಮಾಡುತ್ತಾ ಇದ್ದೇವೆ. ಪರಿಸರ ಮಂಡಲಿ ಇದೆ. ಆದರೂ ಇದು ಯಾವುದನ್ನೂ ಸಹ ಗಮನಕ್ಕೆ ತೆಗೆದುಕೊಂಡಿಲ್ಲ. ಎಲ್ಲರನ್ನೂ ಕರೆದು ಇದು ಬರೀ ವ್ಯಾಪಾರ ಅಂತಲೇ ತಾವು ತೆಗೆದುಕೊಳ್ಳಿರಿ ಹೋಗಲಿ ವ್ಯಾಪಾರ ಎಂದು ಮಾಡಿದಿರೊ ಅದೂ ಇಲ್ಲ. ಸರಿಯಾದ ವ್ಯಾಪಾರ ಅಂದರೆ ಸರ್ಕಾರಕ್ಕೆ ಲಾಭ ಬರಲಿಲ್ಲ, ಅನುಮತಿ ಕೊಟ್ಟವರಿಗೆ ಲಾಭ ಬಂದುಬಿಟ್ಟಿತು ಸರ್ಕಾರದ ಖಜಾನೆಗೆ ಲಾಭ ಆಗಲಿಲ್ಲ. ಸರ್ಕಾರದ ಖಜಾನೆಗೆ ಲಾಸೇ ಎಂದೂ ಲಾಭ ಬರಲಿಲ್ಲ. ಇವತ್ತು ನಮ್ಮ ಸರ್ಕಾರದಲ್ಲಿ ಹಣ ಇಲ್ಲ ಬಂದು ಹೇಳುತ್ತಿದ್ದೀರಿ. ಹೀಗಿರುವಾಗ ಅವರಿಗೆ ಕಲ್ಲುಗಳನ್ನು ತೆಗೆಯುವುದಕ್ಕೆ ಅನುಮತಿಕೊಟ್ಟು ನಿಮ್ಮ ಸರ್ಕಾರದ ಖಜಾನೆಗೆ ಲಾಸ್ ಏಕೆ ಮಾಡಿಕೊಳ್ಳಬೇಕು. ಬಂದು ಸಾವಿರ ಅರ್ಜಿ ಬಂದಿದೆ ಬಂದು ನಾನು ತಿಳಿದಿದ್ದೇನೆ. ತಮ್ಮ ಹತ್ತಿರ ಎಷ್ಟು ಬಂದಿದೆಯೋ ನನಗೆ ಗೊತ್ತಿಲ್ಲ ಆ ಅರ್ಜಿಗಳನ್ನು...

ಶ್ರೀ ಬಿ. ಶಿವಣ್ಣ.—ನಿಮಗೆ ಹೇಗೆ ಗೊತ್ತಾಯಿತು.

ಶ್ರೀ ವಾಟಾಳ್ ನಾಗರಾಜ್.—ಯಾರಿಂದ ಗೊತ್ತಾಯಿತು ಎಂದು ನಾನು ಹೇಳುವುದು. ಅವರಿಗೆ ನೀವು ತೊಂದರೆ ಕೊಡುವುದು, ಅದು ಬೇಡ, ಅದು ಸರಿಯಲ್ಲ. ಅದು ಸರಿಯಾದ ರೀತಿಯಲ್ಲ. ಅದಾದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಆ ಅರ್ಜಿಗಳನ್ನು ತರಿಸಿ, ಸ್ವಲ್ಪ ಅವರ ಪಂಚನಾಮೆ ನಡೆಸಿ, ಅವರು ಯಾರು, ಯಾರ ಮಗ, ಇವರ ಹಿಂದೆ ಯಾರ್ಯಾರು ಇದ್ದಾರೆ. ಇದನ್ನೆಲ್ಲಾ ನೋಡಿದರೆ ಇವರ ಹಿಂದೆ ಯಾರಿದ್ದಾರೆ ಏನ್ನುವುದು ತಮ್ಮ ಗಮನಕ್ಕೆ ಬರುತ್ತದೆ. ಆದುದರಿಂದ ಅರ್ಜಿಗಳನ್ನು ತರಿಸಿ ನೋಡಿ, ಅಲ್ಲಿಯವರೆಗೆ ಒಂದು ತಡೆಯಾಜ್ಞೆ ಕೊಡಿ. ನೀವು ಅನುಮತಿ ಕೊಟ್ಟಿದ್ದೀರಲ್ಲ ಅದಕ್ಕೆ ದಯವಾಡಿ ಒಂದು ತಡೆಯಾಜ್ಞೆ ಕೊಡಿ. ತಡೆಯಾಜ್ಞೆಯನ್ನು ತಾವು ಕೊಡಬೇಕು. ಸೆಕ್ಷನ್ ೩೦ಳರ ಪ್ರಕಾರ ಈಗ ಆರ್ಡರ್ ಹೊರಡಿಸಿದ್ದೀರಲ್ಲ ಅದಕ್ಕೆ ಒಂದು ತಡೆಯಾಜ್ಞೆ ಕೊಡಿ ತಡೆಯಾಜ್ಞೆ ಕೊಟ್ಟರೆ ನಿಮಗೂ ಗೌರವ ಬರುತ್ತದೆ, ಹೌದಪ್ಪ ಒಂದು ಮಾತಿಗೆ ಬೆಲೆ ಕೊಟ್ಟಿದ್ದಾರೆ, ಈ ಸದನದಲ್ಲಿ ಹೇಳಿದಂಥ ಮಾತಿಗೆ ಬೆಲೆ ಬಂದಿದೆ, ಗೌರವ ಬಂದಿದೆ ಎನ್ನತಕ್ಕಂಥ ಮಾತು ಬರುತ್ತದೆ. ನಿಮ್ಮನ್ನು ತಪ್ಪುದಾರಿಗೆ ಎಳೆಯಬೇಕಾದರೆ ಕಾರಣ ಯಾರು? ನಾನು ಬ್ರಹ್ಮಚಾರಿ ಎಂದು ತಾವು ಹೇಳಿದಿರಿ. ತಾವು ಏಕೆ ತಪ್ಪುದಾರಿಯಲ್ಲಿ ಸಿಕ್ಕಿ ಹಾಕಿಕೊಂಡಿರಿ ಎಂದು ನನಗೆ ಮನಸ್ಸಿನಲ್ಲಿ ದುಗುಡ. ತಮಗೆ ಮಕ್ಕಳು ಇಲ್ಲ, ಮಠ ಇಲ್ಲ ಏನಿಲ್ಲ. ಇವರಿಗೆ ಏಕಪ್ಪ ಬೇಕು ಸಂಸಾರಿಯಾಗಿದ್ದರೆ, ಏನೋ ಸಂಸಾರಿ ಮಾಡಿದ ಹೋಗಲಿ ಎಂದು ಹೇಳಬಹುದು ಆದರೆ ಅದೂ ಇಲ್ಲವೆ. ತಮ್ಮನ್ನು ಈ ತಪ್ಪುದಾರಿಗೆ ಎಳೆದವರು ಯಾರು, ಯಾವ ಪುರುಷಾರ್ಥಕ್ಕೆ ಇದು. ಅವರಿಂದ ಇದರ ಬಗ್ಗೆ ತಾವು ಸಮಗ್ರವಾಗಿ ಯೋಚನೆಮಾಡಿ. ನಿಮ್ಮ ಅಧಿಕಾರಿಗಳ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವಿಲ್ಲ, ಖಂಡಿತ ಇಲ್ಲ ನಿಮ್ಮ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರು ಯಾರೇ ಆಗಿರಲಿ ಅವರ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವಿಲ್ಲ. ನಿಮಗೆ ಏಕೆ ಈ ಮಾರ್ಗ ಈ ದಾರಿಯನ್ನು ಅವರು ತೋರಿಸಿದವರು. ಇದು ನನಗೆ ಒಳ್ಳೆಯದು ಕಾಣಲಿಲ್ಲ. ಆದ್ದರಿಂದ ಇದರ ಬಗ್ಗೆ ಸಮಗ್ರವಾಗಿ ಒಂದು ಚಿಂತನೆ ಆಗಲೇಬೇಕು. ದಯವಾಡಿ ನೀವು ಈ ಬಗ್ಗೆ ಒಂದು ನಿರ್ಧಾರವನ್ನು ಕೈಗೊಳ್ಳಲೇ ಬೇಕು.

ಅಧ್ಯಕ್ಷರು.—ನೀವು ಮುಗಿಸಬೇಕು. ಮೂರುಗಂಟೆಯಾಯಿತು ನಿಮ್ಮ ಭಾಷಣ.

ಶ್ರೀ ಪಾಟಾಳ್ ನಾಗರಾಜ್.—ಇನ್ನೊಂದು ೨೦ ನಿಮಿಷ ಮಾತಾಡುತ್ತೇನೆ.

ಅಧ್ಯಕ್ಷರು.—ಇನ್ನೊಂದು ೨೦ ನಿಮಿಷದಲ್ಲಿ ಮುಗಿಸಿಬಿಡಿ. ನಾನು, ನೀವು ಮಂತ್ರಿಗಳು ಮೂರು ಜನ ಕಂಳಿತು ಸೈಲೆಂಟಾಗಿ ನಿಮ್ಮ ಭಾಷಣ ಮುಗಿಸೇ ಇವತ್ತು...

ಶ್ರೀ ಪಾಟಾಳ್ ನಾಗರಾಜ್.—ಬೇಡ ಬಿಡಿ, ಹಾಗಾದರೆ ನಾನು ಕುಳಿತುಕೊಂಡು ಬಿಡುತ್ತೇನೆ. ತಾವು ಆ ತರಹ ಒಂದು ನಿರುತ್ಸಾಹದಲ್ಲಿ ಮಾತನಾಡುವುದಾದರೆ ನಾನು ಮುಗಿಸುತ್ತೇನೆ.

ಅಧ್ಯಕ್ಷರು.—ನಾನು ಮೂರು ಗಂಟೆ ಕಾಲಾವಕಾಶ ಕೊಟ್ಟಿದ್ದೇನೆ. ಇಷ್ಟರಮೇಲೂ ನೀವು ಸಿಟ್ಟಿಗೆದ್ದರೆ...

ಶ್ರೀ ಪಾಟಾಳ್ ನಾಗರಾಜ್.—ತಾವು ಕೇಳುವುದಕ್ಕೆ ತಯಾರಾಗಿಲ್ಲ, ನಾವು ಮೂರೇ ಜನ ನಿಮ್ಮ ಭಾಷಣ ಕೇಳುತ್ತೇವೆ ಅಂದರೆ ನಾನು ಒಬ್ಬ ನಿರುಪಯೋಗಿ ಭಾಷಣ ಮಾಡಿದಹಾಗೆ ಆಯಿತು ಇಲ್ಲಿ. ಆದುದರಿಂದ ನಾನು ಮಾನ್ಯ ಅಧ್ಯಕ್ಷರಿಗೆ ವಂದನೆ ಸಲ್ಲಿಸುತ್ತೇನೆ.

ಅಧ್ಯಕ್ಷರು —ನಾನು ಆದೇಶ ಕೊಡುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಆಯಿತು ಸ್ವಾಮಿ, ತಮ್ಮ ಆದೇಶ ಬೇಡಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಸನ್ಮಾನ್ಯ ಅಧ್ಯಕ್ಷರೆ, ಕರೀಕಲ್ಲು ರಾಷ್ಟ್ರೀಕರಣವಾಗಿದ್ದು, ೧೯೭೮ರಲ್ಲಿ. ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀದೇವರಾಜ ಅರಸು ಅವರು ಬಡವರಿಗೆ ಇದರಿಂದ ಅನುಕೂಲವಾಗಬಹುದೆಂದು ತಿಳಿದು ಹಲವಾರು ಕಾರ್ಖಾನೆಗಳನ್ನು ತೆರೆದಿದ್ದಾರೆ. ತಾವು ಸಹ ಮದ್ದೂರಿನಲ್ಲಿ ಕಾರ್ಖಾನೆಯೊಂದನ್ನು ಮಾಡಿದ್ದೀರಿ. ಆಗ ಯಾರಿಗೂ ಪಾಲಿಷ್ ಕಟಿಂಗ್ ಮಾಡುವಂಥ ಕಾರ್ಖಾನೆಗಳನ್ನು ತೆರೆಯುವಂಥ ಉದ್ದೇಶ ಇರಲಿಲ್ಲ. ಏಕೆಂದರೆ ಈ ಕಾರ್ಖಾನೆಗಳಿಂದ ಲಾಭವೂ ಇರಲಿಲ್ಲ, ಯಾವ ರೀತಿಯ ಪ್ರಯೋಜನವೂ ಇರಲಿಲ್ಲ. ೧೯೭೮ ರಲ್ಲಿ ಕರೀಕಲ್ಲು ರಾಷ್ಟ್ರೀಕರಣವಾಯಿತು, ೧೯೮೩ ರಲ್ಲಿ ಪಿಂಕ್ ಮತ್ತು ಮಲ್ಟಿ ಕಲರ್ ಕಲ್ಲು ರಾಷ್ಟ್ರೀಕರಣವಾಯಿತು, ನಂತರ ಇದನ್ನು ಮೈಸೂರು ಮಿನರಲ್ಸ್ ಸಂಸ್ಥೆಗೆ ವಹಿಸಿದರು. ಅವರು ಹಲವಾರು ಕ್ವಾರಿಗಳನ್ನು ತೆಗೆದುಕೊಂಡರೂ ಎಲ್ಲಾ ಕ್ವಾರಿಗಳಲ್ಲೂ ಕೆಲಸ ಮಾಡುವುದಕ್ಕೆ ಆಗಲಿಲ್ಲ. ಕ್ವಾರಿ ಕೆಲಸ ಮಾಡುವವರು ನಮ್ಮ ರಾಜ್ಯದಲ್ಲಿ ಯಾರೂ ಇಲ್ಲ. ಕಲ್ಲು ಕೆಲಸ ಮಾಡುವವರಿಗೆ ಈ ಕೆಲಸ ಮಾಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ತಮಿಳುನಾಡಿನಿಂದಲೇ ಜನರನ್ನು ಕರೆದುಕೊಂಡು ಬಂದು ಕೆಲಸ ಮಾಡಿಸಬೇಕು. ೧೯೭೮ರಲ್ಲಿ ಬಂದು ಕಲ್ಲನ್ನು ಲಾರಿಗೆ ಲೋಡ್ ಮಾಡಬೇಕಾದರೆ, ೧೦೦ ರೂಪಾಯಿ ಕೊಡುತ್ತಿದ್ದರು. ಆ ಕೆಲಸವನ್ನು ಕೂಡ ತಮಿಳುನಾಡಿನವರೇ ಮಾಡುತ್ತಿದ್ದರು. ಈಕೆಲಸಗಾರರ ತೊಂದರೆಯಿಂದ ಮೈಸೂರು ಮಿನರಲ್ಸ್ ಸಂಸ್ಥೆಯವರು ಎಲ್ಲಾ ಕ್ವಾರಿಗಳನ್ನು ಆಪರೇಟ್ ಮಾಡುವುದಕ್ಕಾಗಲಿಲ್ಲ. ಕೊನೆಗೆ ಯಾವರೀತಿ ಮಾಡಿಸಬೇಕು ಎಂದು ಸೂಪರ್‌ವೈಸ್ ಮಾಡುವುದಕ್ಕೂ ನಮ್ಮ ರಾಜ್ಯದಲ್ಲಿಜನ ಸಿಗಲಿಲ್ಲ. ತಮಿಳುನಾಡಿನಿಂದ ಕೆಲಸರನ್ನು ಕರೆದುಕೊಂಡು ಬಂದು ಸೂಪರ್‌ವೈಸರ್ ಆಗಿ ನೇಮಿಸಿದರು. ಹೀಗಾಗಿ ಮೈಸೂರು ಮಿನರಲ್ಸ್ ಸಂಸ್ಥೆ ಕೆಲಸ ಮಾಡುವುದಕ್ಕೆ ಆಗದೆ ಲಾಸ್ ಆಗಿದೆ. ಲಾಸ್ ಆಗುವುದಕ್ಕೆ ಮುಖ್ಯವಾದ ಕಾರಣವೇನೆಂದರೆ, ಅಲ್ಲಿನ ಅಧಿಕಾರಿಗಳು ತಮಿಳುನಾಡಿನವರ ಕೈಲಿ ಕೆಲಸ ಮಾಡಿಸುವುದು, ಒಂದು ಕ್ಯೂಬಿಕ್ ಮೀಟರ್‌ಗೆ ೫೦೦ ರೂಪಾಯಿಯಂತೆ ಕೊಡುತ್ತಿದ್ದರು ಇವರ ಆಫೀಸ್ ಎಕ್ಸ್‌ಪೆಂಡೀಚರ್. ಸರ್ಕಾರದ್ದು ರಾಯಲ್ಟಿ ಎಲ್ಲಾ ಸೇರಿ ೨–೩ ಸಾವಿರ ರೂಪಾಯಿಯಾದರೆ ಅದಕ್ಕೆ ಒಂದಿಷ್ಟು ಪಾರ್ಜಿನ್ ಮನಿ ಇಟ್ಟುಕೊಂಡು ೪೦೦೦ ರೂಪಾಯಿಗೆ ಒಂದು ಕ್ಯೂಬಿಕ್ ಮೀಟರ್‌ನಂತೆ ಫಾರಿನ್‌ಗೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಆದರೆ, ಆವತ್ತಿನ ದಿವಸವೇ ಅದರ ಬೆಲೆ ೭–೮ ಸಾವಿರ ರೂಪಾಯಿ ಇತ್ತು. ಬಾಕಿ ಹಣವನ್ನು ಬ್ಲಾಕ್ ಮನಿಯಾಗಿ ತೆಗೆದುಕೊಳ್ಳುತ್ತಿದ್ದರು. ಆಮೇಲೆ ಕೆಲಸಗಾರರು ಒಂದು ಈ ದರಕ್ಕೆ ಕೆಲಸ ಮಾಡುವುದಿಲ್ಲ. ಅಲ್ಲಿದ್ದ ಅಧಿಕಾರಿಗಳು ವರ್ಗಾವಣೆಯಾಗಿ ಹೋಗುತ್ತಾರೆ, ನಂತರ ಬಂದ ಅಧಿಕಾರಿಗಳು ದರ ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ, ಮತ್ತೆ ಎಕ್ಸ್‌ಪೆಂಡೀಚರ್ ಆಗುತ್ತೆ, ಲಾಸ್ ಆಗುತ್ತೆ ಹೀಗಾಗಿ ಯಾರೂ ಕೆಲಸ ಮಾಡದೆ ಎಲ್ಲ ಕ್ವಾರಿಗಳ ಕೆಲಸ ನಿಂತುಹೋಯಿತು. ನಂತರ ೧೯೭೮ ರಲ್ಲಿ ಕೆಲವರಿಗೆ ೫ ವರ್ಷ ಮತ್ತು ಕೆಲವರಿಗೆ ೧೦ ವರ್ಷಗಳ ಅವಧಿಗೆ ಕ್ವಾರಿಯನ್ನು ಲೀಸ್‌ಗೆ ಕೊಡಲಾಯಿತು. ಹತ್ತು ವರ್ಷ ಆದಮೇಲೆ ಕೆಲವರು ಕ್ವಾರಿ ಓನರ್ಸ್ ಹೈಕೋರ್ಟಿಗೆ, ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿ ಕೊಡಬಾರದು ಎಂದು ತಿರಸ್ಕೃತವಾಯಿತು. ಇದು ಬಹಿರಂಗ ವಿಷಯವಾಯಿತು

ಅಂದರೆ, ಕ್ವಾರಿ ಅಸೋಸಿಯೇಷನ್‌ನಲ್ಲಿ ದೊಡ್ಡ ದೊಡ್ಡವರು ಇದ್ದಾರೆ. ಮಾನ್ಯ ಮಾಟಾಳ್ ನಾಗರಾಜ್ ರವರು ಹೇಳಿದಂತೆ ಸಣ್ಣ ಪುಟ್ಟವರು ಕ್ವಾರಿಯನ್ನು ಲೀಸ್‌ಗೆ ತೆಗೆದುಕೊಂಡು ಕೆಲಸ ಮಾಡಿಸುವುದ ಕ್ಕಾಗುವುದಿಲ್ಲ ನಾವು ಹೇಗೆ ಮಾಡುವುದು ಎಂದು ಎಲ್ಲರಿಗೂ ಹೆದರಿಕೆ ಭಯ ಇತ್ತು. ಈಗ ಎಲ್ಲರಿಗೂ ಅನುಭವ ಬಂದಿದ್ದು ದುಡ್ಡು ಸಿಗುತ್ತದೆ ಎನ್ನುವಷ್ಟರಲ್ಲಿ ರಾಷ್ಟ್ರೀಕರಣವಾಯಿತು. ಕ್ವಾರಿ ಮಾಲೀಕ ರೆಲ್ಲರೂ ಹಿಂದಿನ ಸರ್ಕಾರದ ಮೇಲೆ ಒತ್ತಡ ತಂದರು. ಇದನ್ನು ಸಡಿಲ ಮಾಡಿದರೆ ಸರ್ಕಾರಕ್ಕೆ ಕೆಟ್ಟಹೆಸರು ಬರುತ್ತದೆಂದು ನಿರ್ಧಾರ ಮಾಡಿ, ಒಂದು ಉಪಾಯ ಕಂಡುಹಿಡಿದರು ಫ್ಯಾಕ್ಟರಿಗಳನ್ನು ಮಾಡಿದವರಿಗೆ ಅನುವಂಶಿ ಕೊಡುವುದು ಎಂದು ನಿರ್ಧಾರ ಮಾಡಿಕೊಂಡು ಹಿಂದಿನ ಸರ್ಕಾರ ಇದ್ದಾಗಲೇ ಎಲ್ಲರೂ ಫ್ಯಾಕ್ಟರಿಗಳನ್ನು ತೆರೆದರು. ಈ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವವರು, ಮಿಷನರಿ ಕೆಲಸ ಮಾಡುವವರು ತಮಿಳುನಾಡಿನ ಕೆಲಸಗಾರರು. ಕಲ್ಲನ್ನು ಪಾಲಿಷ್ ಮಾಡುವವರೂ ಅವರೆ. ಕಲ್ಲಿನ ಪುಡಿಹಾಕುವವರೂ ಅವರೆ. ಆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವುದಕ್ಕೆ ಎಲ್ಲ ಕೆಲಸಗಾರರನ್ನೂ ತಮಿಳುನಾಡಿನಿಂದಲೇ ಕರೆದು ಕೊಂಡು ಬರಬೇಕು. ನಮ್ಮ ರಾಜ್ಯದವರಿಗೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ, ಕೆಲಸಗಾರರು ಸಿಗುವುದಿಲ್ಲ. ಇವತ್ತು ಈ ರಾಜ್ಯದಲ್ಲಿ ಸೈಟುಗಳನ್ನು ಮತ್ತು ಮನೆಗಳನ್ನು ಬೇರೆ ದೇಶದವರಿಗೆ ಕೊಡುತ್ತಿದ್ದೇವೆ ಇವರು ಮಾಡಿದಂಥ ಕಾನೂನಿನಿಂದ ತಮಿಳುನಾಡಿನವರಿಗೆ ಕೆಲಸವನ್ನೂ ಕೊಟ್ಟಂತಾಗುತ್ತದೆ, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮತ್ತೆ ಮಾನ್ಯ ಮಂತ್ರಿಗಳು ರಾಯಲ್ಟಿ ಜಾಸ್ತಿ ಬರುತ್ತದೆಂದು ಹೇಳಿದರು. ರಾ ಮೇಟೀರಿಯಲ್ ಕಳ್ಳಹಿಸುವುದನ್ನು ನಿಲ್ಲಿಸಿದರೆ ರಾಯಲ್ಟಿ ಜಾಸ್ತಿ ಸಿಗುತ್ತದೆ. ಇವರು ರಾಮೆಟೀರಿಯಲ್ ಎಕ್ಸ್‌ಪೋರ್ಟ್ ನಿಲ್ಲಿಸುತ್ತೇವೆಂದರು. ಅಂದರೆ ಇವತ್ತು ಜಪಾನ್ ಸಂಸ್ಥೆಯವರು ಒಂದು ಇಂಚು, ಎರಡು ಇಂಚು. ಕಲ್ಲು ಕಳುಹಿಸಿದರೆ ತೆಗೆದುಕೊಳ್ಳುವುದಿಲ್ಲ. ಅವರ ಹತ್ತಿರ ಬಳ್ಳೆಯ ಮಿಷನರಿಗಳು ಇವೆ. ಅಲ್ಲಿ ಅವರು ಯಾವ ಸೈಜ್‌ಬೇಕೋ ಅಷ್ಟನ್ನು ಕಟ್ ಮಾಡಿ ಅದನ್ನು ಪೂರಾಟ ಮಾಡುತ್ತಾರೆ. ಬೇಕಾದ ಸೈಜಿಗೆ ಮೆರ ಕೊಯ್ಯುವ ಹಾಗೆ ಬೇಕಾದ ಸೈಜಿಗೆ ಕಲ್ಲನ್ನು ಕೊಯ್ದು ಕೊಡುತ್ತಾರೆ. ಅಂತಹ ಮಿಷನರಿಗಳು ಅವರ ಹತ್ತಿರ ಇವೆ. ಮತ್ತು ಇಲ್ಲಿಂದ ನಾವು ಪಾಲಿಷ್ ಮಾಡಿ ಕಳುಹಿಸುವ ಮೆಟೀರಿಯಲ್‌ಗಳು ಮಧ್ಯದಲ್ಲಿ ಒಡೆದುಹೋಗುತ್ತವೆ, ಡ್ಯಾಮೇಜ್ ಆಗುತ್ತವೆ. ಆದ್ದರಿಂದ, ಹೆಚ್ಚಾಗಿ ಅವರು ಬೇಡಿಕೆ ಕೊಡುವುದಿಲ್ಲ. ಈಗಾಗಲೇ ತಮಿಳುನಾಡು ಸರ್ಕಾರ ಸಹ ನಿಯಮಗಳನ್ನು ಸಡಿಲ ಮಾಡಿ ಹರಾಜು ಹಾಕುತ್ತಿರುವುದರಿಂದ ಅಲ್ಲಿಂದ ಸಹ ಹೋಗುತ್ತಿದೆ. ನಮ್ಮ ರಾಜ್ಯದಿಂದ ಮೆಟೀರಿಯಲ್ ಪಾಲಿಷ್ ಆಗಿ ಹೋಗಬೇಕೆಂದರೆ ಇಲ್ಲಿಗೆ ಬೇಡಿಕೆ ಬರುವುದೇ ಇಲ್ಲ. ಸರ್ಕಾರಕ್ಕೆ ಲಾಭ ಕಡಿಮೆಯಾಗುತ್ತದೆ. ರಾಮೆಟೀರಿಯಲ್ ಅಂದರೆ. ಒಂದು ಕ್ಯೂಬಿಕ್ ಮೀಟರ್ ಕಲ್ಲು ಹೇಗೆ ಇರುತ್ತದೊ ಹಾಗೆ ತೂಕಹಾಕಿ ಕಳುಹಿಸುತ್ತಾರೆ. ಆದರ ತೂಕ ಎಷ್ಟು ಇರುತ್ತದೆ ಅದರ ಮೇಲೆ ಸರ್ಕಾರಕ್ಕೆ ರಾಯಲ್ಟಿ ಬರುತ್ತದೆ. ಇವರು ರಾಮೆಟೀರಿಯಲ್ ಕಳಿಸಬಾರದು ಎಂಬ ಉದ್ದೇಶದಿಂದ ನಾಲ್ಕು ಮೂಲೆ ರಫ್ ಪಾಲಿಷ್ ಮಾಡುತ್ತಾರೆ. ಇವರು ಕಲ್ಲು ಪಾಲಿಷ್ ಮಾಡುವುದರಿಂದ ಕಲ್ಲಿನ ತೂಕ ಕಡಿಮೆಯಾಗುತ್ತದೆ. ಇಷ್ಟೆಲ್ಲಾ ಇದ್ದರೂ ಸಹ ಈಫ್ಯಾಕ್ಟರಿಯವರು ಈಗಾಗಲೆ ೩೦ಫ್ಯಾಕ್ಟರಿಗಳನ್ನು ತೆರೆದಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಈ ಕಲ್ಲಿಗೆ ಜಾಸ್ತಿ ಬೇಡಿಕೆ ಇಲ್ಲ. ಈ ಕಲ್ಲುಗಳನ್ನು ಹಾಕಬೇಕಾದರೆ, ಕೆಳಗಡೆ ಹಾಕಬಹುದು ಅಥವಾ ವಾಲ್‌ಗೆ ಹಾಕಬಹುದು ನೇಮ್ ಪ್ಲೇಟ್‌ಗೆ ಹಾಕಬಹುದು ಅಷ್ಟೆ. ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಬೇಡಿಕೆ ಇಲ್ಲ. ಹೊರ ರಾಷ್ಟ್ರಗಳಿಗೆ ಹೋಗಬೇಕಾದರೆ ಹತ್ತು ಪರ್‌ಸೆಂಟ್ ಟ್ಯಾಕ್ಸ್ ಕೊಡಬೇಕು. ರಾಮೆಟೀರಿಯಲ್ ಹೋದರೂ ಹತ್ತು ಪರ್‌ಸೆಂಟ್ ಟ್ಯಾಕ್ಸ್ ಕೊಡುತ್ತಾರೆ ಮತ್ತೆ ಪಾಲಿಷ್ ಮಾಡಿದರೂ ಹತ್ತು ಪರ್‌ಸೆಂಟ್ ಟ್ಯಾಕ್ಸ್ ಬೀಳುತ್ತದೆ ಆದ್ದರಿಂದ. ರಾಜ್ಯಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವುದು ಇಲ್ಲವೇ ಇಲ್ಲ. ಈ ರೀತಿ ೩೦ ಫ್ಯಾಕ್ಟರಿಗಳನ್ನು ಇಲ್ಲಿ ಮಾಡಿದರೆ. ಅವರೆಲ್ಲಾ ಸರ್ಕಾರದ ಮಟ್ಟದಲ್ಲಿ ಅಂದರೆ ಕೆ.ಎಸ್.ಎಫ್.ಸಿ. ಯಲ್ಲಿ ಸಾಲ ಪಡೆದು ೩೦ ಫ್ಯಾಕ್ಟರಿಗಳನ್ನು ರೆಡಿ ಮಾಡಿ ಇಟ್ಟರು. ಅಲ್ಲಿ ಕೆಲಸವನ್ನಂತೂ ಮಾಡಿರಲಿಲ್ಲ. ಫ್ಯಾಕ್ಟರಿಗಳನ್ನೂ ರೆಡಿ ಮಾಡಿ ಇಟ್ಟು ಕೊಳ್ಳುವಷ್ಟರಲ್ಲಿ ಹಿಂದಿನ ಸರ್ಕಾರ ಹೋಯಿತು. ಈಗ ಈ ಸರ್ಕಾರ ಬಂದಿದೆ. ಅವರು ಈಗ ಏನು ಮಾಡುವುದು ಎಂದು ಇವರ ಹತ್ತಿರ ಅಪ್ರೋಚ್ ಮಾಡಿದ್ದಾರೆ. ಇವರು ಸುಪ್ರೀಮ್ ಕೋರ್ಟ್‌ಗೆ ಹೋದರೂ ಆಗುವುದಿಲ್ಲ. ಈ ಕ್ವಾರಿ ಲೀಸ್ ಕೊಡಬೇಕಾದರೆ, ಯಾರು ಕ್ವಾರಿ ಬೇಕೆಂದು ಮೊದಲು ಅರ್ಜಿ ಹಾಕುತ್ತಾರೆ ಅವರಿಗೆ ಫಸ್ಟ್ ಪ್ರಿಯಾರಿಟಿ ಕೊಡಬೇಕು. ಅವರಿಗೆ ಮಂಜೂರು ಮಾಡಬೇಕೆಂದು ಕಾನೂನಿನಲ್ಲಿತ್ತು. ಅರ್ಜಿ ಹಾಕಿದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಡಿವಿಜನಲ್ ಆಫೀಸ್ ನಿಂದ ಅಲ್ಲಿಗೆ ಕಳುಹಿಸುತ್ತಾರೆ. ಅಲ್ಲಿ ಇನ್‌ಸ್ಪೆಕ್ಷನ್ ರಿಪೋರ್ಟ್ ಮಾಡಿ ತಹಶೀಲ್ದಾರ್ ವರದಿ ತರಿಸುತ್ತಾರೆ ಇದನ್ನೆಲ್ಲಾ ತರಿಸಿಕೊಂಡು ಅವರು ಸ್ಕ್ರಾಂಕ್ಷನ್ ಮಾಡುತ್ತಾರೆ. ಈ ಸರ್ಕಾರ ಬಂದಮೇಲೆ ಹೊಸದಾಗಿ ಕಾನೂನು ಮಾಡಿದ್ದಾರೆ. ಈ ಸರ್ಕಾರ ಬಂದು ಇನ್ನು ಆರು ತಿಂಗಳು ಆಗಿಲ್ಲ, ರಾಜ್ಯಪಾಲರ ಭಾಷಣ ದಲ್ಲಿ 'ಸಡಿಲ' ಎಂದು ಹೇಳಿದರು. ಅವರ ಜೊತೆ ಸಂಧಾನ ಮಾಡಿ ಸಡಿಲ ಮಾಡಿದರು. ಆ ಫ್ಯಾಕ್ಟರಿ

ಗಳವರ ಜೊತೆಗೆ ಮಾತುಕತೆ ಆಡಿ, ಎಲ್ಲಾ ವ್ಯವಹಾರಗಳನ್ನು ಮಾಡಿ ಆ ಫ್ಯಾಕ್ಟರಿಯವರಿಗೆ ಎಷ್ಟು ಅನುಕೂಲ ಬೇಕೋ ಅಷ್ಟು ಮಾಡಲಿಕ್ಕೆ ಒಂದು ಫ್ಯಾಕ್ಟರಿಗೆ ೨೫ ಎಕರೆ ಬ್ಲಾಕ್ ಗ್ರಾನೈಟ್ ಕೊಡಬೇಕೆಂದು ಮಾಡಿದ್ದಾರೆ. ೫೦ ಎಕರೆ ವಿಶ್ರಿತ ಕಲ್ಲುಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಮೊದಲನೆ ಆದ್ಯತೆಯನ್ನು ತೋರಿಸಿದ್ದಾರೆ. ಈಗಾಗಲೇ ಈ ಫ್ಯಾಕ್ಟರಿಯವರು ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಕರೀಕಲ್ಲು ಇದೆ, ಅದರ ಸ್ಕೆಚ್ ಮಾಡಿಮಾಡಿ ಇಟ್ಟುಕೊಂಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಂದಿನ ಶುಕ್ರವಾರ ಮುಂದುವರಿಸಬಹುದು.

ಶ್ರೀ ಎಂ. ಪಿ. ಪೆಂಕಟೇಶ್.—ಆಗಬಹುದು.

ಅಧ್ಯಕ್ಷರು.—ಈಗ ಈ ಸದನ ಮುಂದುವರೆದು ಮತ್ತೆ ಸೋಮವಾರ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಳ್ಳುವುದು.

ಸದನವು ಅಪರಾಹ್ನ ೨ ಗಂಟೆ ೧೮ ನಿಮಿಷಕ್ಕೆ ವಂಕ್ತಾಯವಾಗಿ ಪುನಃ ದಿನಾಂಕ ೧೮ನೇ ಜೂನ್ ೧೯೯೦ರ ಸೋಮವಾರ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.